# ಅಪರಂಜಿ

ಡಿಸೆಂಬರ್ 2005

ತಿಳಿನಗೆಯ ಕಾರಂಜಿ



ಪ್ರಕಾಶ್
ಬಾಗೂರು ಚಂದ್ರು
ನಾ. ಕಸ್ತೂರಿ
ಶಿವು
ಇಸ್ಮಾಯಿಲ್
ಬಿ.ಜಿ.ಎಲ್. ಸ್ವಾಮಿ
ಕೆ.ಎನ್. ಮಹಾಬಲ
ಬಿ.ವಿ. ರಾಜಗೋಪಾಲ್
ಗುರು
ಎಚ್. ಗೋಪಾಲಕೃಷ್ಣ
ಕು.ಕ.
ಸೂರಿ ಹಾರ್ದಳ್ಳಿ
ಬೇಲೂರು ರಾಮಮೂರ್ತಿ
ವನಂಆ

ಪ್ರತಿ: ರೂ. 10.00



# ಅಪರಂಜಿ

ತಿಳಿನಗೆಯ ಕಾರಂಜಿ







**ಚಂದಾ ವಿವರ:**

ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಮುದ್ರಣ: ರವಿ ಗ್ರಾಫಿಕ್ಸ್
*ಅಕ್ಷರಜೋಡಣೆ:*
ಒಮೇಗಾ ಲೇಸರ್ ಟೆಕ್




## *ಈ ಸಂಚಿಕೆಯಲ್ಲಿ .....*


**ಸಂಪುಟ 23 ಸಂಚಿಕೆ - 3**

**ಡಿಸೆಂಬರ್ - 2005**





*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080- 23345259
email: aparanji@hotmail.com website: aparanjimag.com



*ಸಂಪರ್ಕ ವಿಳಾಸ:* ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068.




ಂ ಪ್ರಕಾಶ್

ಮೋಟರ್ ಬೈಕ್ ಅಬ್ಬರದಲ್ಲಿ ಮರೆಯಾಗುತ್ತಿರುವ ಸೈಕಲ್
- ಸುದ್ದಿ

**"Sighಕಲ್" ಅನ್ನಬಹುದು ಈಗ!!**

★★★

'ಭಾರತ - ಪಾಕಿಸ್ತಾನಗಳ ಗಡಿರೇಖೆ ಅಳಿಸಲು ಭಾರಿ ಭೂಕಂಪ ಬೇಕಾಯಿತೆ?' ಎಂದು ಅಪರಂಜಿ ಪರಿತಪಿಸಿದಳಂತೆ!

★★★

ನನ್ನನ್ನು ತುಳಿದು ಹೋದವರು ಏನಾದರು?
- ಮಾಜಿ ಪ್ರಧಾನಿ

**'ಕಾಲು ತೊಳೆದುಕೊಂಡರು' ಅಂತ ಹೇಳುವುದು ಶುದ್ಧ ಕುಹಕ!**

★★★

ಜಾರ್ಜ್ ಬುಷ್ ಗೋತ್ರ ಯಾವುದು ಅಂದರೆ, 'ಸ್ವತಂತ್ರ ಕಪಿಗೋತ್ರ' ಅನ್ನೋದೇ?

★★★

ಸಾರಿಗೆ ನಿಗಮದಿಂದ 'ಅವತಾರ್' ಯೋಜನೆ
- ಸುದ್ದಿ

**ಯೋಜನೆ ಪಾಟ್ ಹೋಲ್‌ಗಳಲ್ಲಿ ಬೀಳದಿರಲಿ!!**

★★★

ಬೇಳೆಕಾಳುಗಳ ಬೆಲೆ ಏರಿಕೆ


- ಸುದ್ದಿ

ಬೇಯಿಸಲು ನೀರಿಗೂ ಅಭಾವವಾದರೆ ಗತಿ??


★★★

ಡಾ|| ಎಂ.ಸಿ. ಮೋದಿ ಅವರ ಕರ್ಮಯೋಗದಿಂದ ತುಂಬಿದ ಜೀವನ ನೆನೆದು ಅಪರಂಜಿ ಕಣ್ಣೀರಿಟ್ಟಳಂತೆ!!

★★★



ಕಂಪ್ಯೂಟರ್ ಅಡಿಕ್ಷನ್ ಅಂದರೆ ಹೀಗೇ...



# ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ಕಳೆದ ಕೆಲವು ವರ್ಷಗಳಿಂದ ನಡೆದು ಬಂದಿರುವ ಒರಿಜಿನಲ್ ಹಾಸ್ಯೋತ್ಸವ ಡಿಸೆಂಬರ್ 25 ನಾ. ಕಸ್ತೂರಿಯವರ ಜನ್ಮದಿನ ಎಂದು ನಮಗೆ ಜ್ಞಾಪಿಸುತ್ತದೆ. ಈಚೆಗೆ ರಾಶಿ ಶತಮಾನೋತ್ಸವದ 'ಅರಪಂಜಿ' ವಿಶೇಷ ಸಂಚಿಕೆಯಲ್ಲಿ ಕೃಷ್ಣ ಸುಬ್ಬರಾವ್ ರಾಶಿ-ಕಸ್ತೂರಿಯವರ ನಡುವಿನ ಮಧುರ ಬಾಂಧವ್ಯದ ಬಗೆಗೆ ಬರೆದಿದ್ದಾರೆ.

ನನ್ನ ಕಸ್ತೂರಿಯವರ ಸಂಬಂಧ ದೀರ್ಘ, ಆದರೆ ವಿಚಿತ್ರ. ನಾನು ಅವರನ್ನು ಮೊದಲು ನೋಡಿದ್ದು ನನಗೆ ಹತ್ತು ವರ್ಷವಾಗಿದ್ದಾಗ, ಬಾಗೂರು ಎನ್ನುವ ಪುಟ್ಟ ಹಳ್ಳಿಯಿಂದ ಅಷ್ಟೇನೂ ದೊಡ್ಡದಲ್ಲದ ತಾಲ್ಲೂಕು ಕೇಂದ್ರ ಹೊಸದುರ್ಗಕ್ಕೆ ಆಗ ತಾನೇ ಬಂದಿದ್ದಾಗ. ಆಗ ಅಲ್ಲಿ ಅವರು ಮಾಡಿದ ನಗೆ ಭಾಷಣ ಮೊಟ್ಟಮೊದಲ ಬಾರಿಗೆ ಬಾಗೂರು ಹೊರಗೂ ಒಂದು ಪ್ರಪಂಚವಿದೆ ಎಂದು ನನ್ನ ಕಣ್ಣು ತೆಗೆಸಿತು. ಆ ಭಾಷಣ ಒಂದು ರೀತಿಯಲ್ಲಿ ಏಕವ್ಯಕ್ತಿ ಹಾಸ್ಯೋತ್ಸವ. ಕಸ್ತೂರಿಯವರ ಮಾತಿನ ಗುಂಗಿನಿಂದ ಹೊರಗೆ ಬರಲು ನನಗೆ ಹಲವು ಭಾಷಣದ ಕೆಲವು ಭಾಗಗಳು ಐವತ್ತು ವರ್ಷಗಳ ನಂತರವೂ ನನ್ನ ಮನಸ್ಸಿನಲ್ಲಿ ಹಸಿರಾಗಿ ಉಳಿದಿವೆ. ವಿಚಿತ್ರವೆಂದರೆ ಆ ದಿನ ನನಗೆ ಅವರು ನಾ. ಕಸ್ತೂರಿ ಎನ್ನುವುದು ಗೊತ್ತೇ ಇರಲಿಲ್ಲ. ಮುಂದೆ ಗೊತ್ತಾದ ಮೇಲೆ ನಾನೆಂದೂ ಅವರನ್ನು ನೋಡಲಿಲ್ಲ, ಆದರೆ ಒಂದು ರೀತಿಯಲ್ಲಿ, ದೂರದಿಂದ ಅವರನ್ನು ಹಿಂಬಾಲಿಸುತ್ತಿದ್ದೇನೆ.

ನಾನು ಹೈಸ್ಕೂಲಿನಲ್ಲಿದ್ದಾಗ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿದ್ದ ಸಾರ್ವಜನಿಕ ಪುಸ್ತಕ ಭಂಡಾರದಲ್ಲಿಯೇ ಕುಳಿತು ಕಸ್ತೂರಿಯವರ 'ಚಕ್ರದೃಷ್ಟಿ', 'ಗೃಹದಾರಣ್ಯಕ'ಗಳನ್ನು ಓದಿದ್ದು. ಆಗ ಅಲ್ಲಿ ಅಷ್ಟೊಂದು ಜನರ ನಡುವೆ ಓದುತ್ತಿದ್ದೇನೆ ಎನ್ನುವ ಅರಿವಿದ್ದರೂ ಒಳಗಿನಿಂದ ಬರುತ್ತಿದ್ದ ನಗುವನ್ನು ಎಷ್ಟೇ ಪ್ರಯತ್ನಪಟ್ಟರೂ ಅದುಮಿಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆಗ ಅಲ್ಲಿಯೇ ಗಂಭೀರ ಪುಸ್ತಕಗಳನ್ನು ಓದುತ್ತಿರುವವರಲ್ಲಿ ಒಬ್ಬರು ಕೆಲವು ವರ್ಷಗಳ ನಂತರ ರಸ್ತೆಯಲ್ಲಿ ನನ್ನನ್ನು ಕಂಡಾಗ ವಿಚಿತ್ರವಾಗಿ ನೋಡುತ್ತಿದ್ದರು. ಅವರ ಮುಖದಲ್ಲಿ 'ಅರೇ ಇವನನ್ನು ಇನ್ನೂ ರಸ್ತೆಯಲ್ಲಿ ಓಡಾಡುಕ್ಕೆ ಬಿಟ್ಟಿದಾರಲ್ಲ' ಎನ್ನುವ ಭಾವ ಎದ್ದು ಕಾಣಿಸುತ್ತಿತ್ತು.

ಅನರ್ಥ ಕೋಶದ ಪರಿಚಯವಾದುದು ಸ್ನೇಹಿತರೊಬ್ಬರ ಮೂಲಕ. ಆಗ ಅವರು ಓದಿದ್ದು ಚಮಚ=ಕೈಗೆ ಅಸಹ್ಯವೆನಿಸುವುದನ್ನು ಬಾಯಿಗೆ ಸಾಗಿಸುವ ಸಾಧನ ಎನ್ನುವ ವಿವರಣೆ. ಆಗ ಅವರು ಅಸಹ್ಯ ಪದವನ್ನು ಅಸಂಯ್ಯ ಎಂದು ಉಚ್ಚರಿಸಿದ, ಆ ಅಸಂಯ್ಯದ ಭಾವ ಮುಖದ ತುಂಬಾ ತೋರಿಸಿದ ರೀತಿ ನಗೆ ಬುಗ್ಗೆಯನ್ನು ಚಿಮ್ಮಿಸಿತ್ತು. ಅನರ್ಥ ಕೋಶದ ಮೇಲೆ ಎಷ್ಟೋ ಬಾರಿ ಕಣ್ಣಾಡಿಸಿದ್ದರೂ ಪ್ರತಿಬಾರಿಯೂ ಅಲ್ಲಿರುವ

ಯಾವುದಾದರೂ ಪದದಲ್ಲಿ ಹಿಂದೆ ಕಾಣಿಸದಿದ್ದ ಒಂದು ಹೊಸ ಅರ್ಥ ಕಾಣಿಸುತ್ತದೆ. ಷಣ್ಮುಖ=ಮುಖ ನೋಡಬಾರದು ಎನಿಸುವವ (ಆಂಗ್ಲ ಕನ್ನಡದಲ್ಲಿ) ಎನ್ನುವ ವಿವರಣೆಯನ್ನು ಹಿಂದೆಯೂ ಓದಿರಬೇಕು. ಮೊನ್ನೆ ತಟ್ಟನೆ ಷಣ್ಮುಖ = Shunಮುಖ, ಎಂದು ಗ್ರಹಿಸಿದಾಗ ಕಸ್ತೂರಿಯವರ ಪ್ರತಿಭೆ ಯಾವ ಮಟ್ಟದ್ದು ಎನ್ನುವುದು ತಿಳಿಯಿತು. ಹಿಗೆಯೇ ಅಲ್ಲಿ ರ=ಅಸು ನೀಗಿದ ಅಸುರ ಎಂದಿದೆ. ನನ್ನಂತಹ ಟ್ಯೂಬ್ ಲೈಟುಗಳಿಗೆ ಅಸುರ ಬರೆದು ಅಸು ಹೊಡೆದು ಹಾಕಿದ್ದರೆ ಈ ಅನರ್ಥ ತಕ್ಷಣ ನಗೆ ತರುತ್ತಿತ್ತೇನೋ. ಅನರ್ಥಕೋಶವನ್ನು ಕೇವಲ ಓದಿದರೆ ಸಾಲದು ಅನುಭವಿಸಬೇಕು.

ನಾನು ಮಹಾರಾಜ ಕಾಲೇಜು ಸೇರಿದಾಗ ಕಸ್ತೂರಿಯವರು ಪ್ರಾರಂಭಿಸಿದ್ದ, ಕಾಲೇಜಿನ ಅಧ್ಯಾಪಕವರ್ಗ ಕಾಲೇಜ್ ದಿನದಂದು ಒಂದು ಆಶುನಾಟಕ ಪ್ರದರ್ಶಿಸುವ ಸಂಪ್ರದಾಯ ಇನ್ನೂ ಜೀವಂತವಾಗಿತ್ತು. ಕಾಲೇಜಿನಲ್ಲಿ ನನ್ನ ಪ್ರಥಮ ವರ್ಷದಲ್ಲಿ ಪ್ರದರ್ಶಿಸಿದ ನಾಟಕದ ಒಂದು ತುಣುಕು: ಮೈಸೂರು ವಿಶ್ವವಿದ್ಯಾನಿಲಯದ ಧ್ಯೇಯ ವಾಕ್ಯ - ನಹಿ ಜ್ಞಾನೇನ ಸದೃಶಂ, ಇಂಗ್ಲೀಷಿನಲ್ಲಿ there is nothing like knowledge. ಇಂಗ್ಲೀಷಿನಲ್ಲಿ ಈ nothing like ಪದಗಳನ್ನು ಇದಕ್ಕೆ ಸಮಾನವಾದದ್ದು ಯಾವುದೂ ಇಲ್ಲ ಎಂದು ಹೆಮ್ಮೆಯಿಂದ ಹೇಳಬಹುದು ಅಥವಾ ಇಂತಹುದೇನೂ ಇಲ್ಲ ಎಂದು ತಿರಸ್ಕಾರದಿಂದ ಹೇಳಬಹುದು. ಅಂದಿನ ನಾಟಕದ ಒಂದು ಪಾತ್ರ ಜ್ಞಾನ ಗೀನ ಅಂತಹುದೇನೂ ಇಲ್ಲವೆನ್ನುವ ರೀತಿಯಲ್ಲಿ ಹೇಳಿದಾಗ ನಾಟಕ ನೋಡುತ್ತಿದ್ದವರಿಗೆ ಸಿಕ್ಕ ಖುಷಿ ಅಪರೂಪವಾದದ್ದು.

ನಾನು ಆಕಾಶವಾಣಿ ಸೇರುವ ಹೊತ್ತಿಗೆ ಕಸ್ತೂರಿ ಸಾಯಿಬಾಬರ ಆಶ್ರಮ ಸೇರಿದ್ದರು. ಆದರೆ ಅವರು ಮೈಸೂರು ಆಕಾಶವಾಣಿಯಲ್ಲಿ ಪಸರಿಸಿದ ಪರಿಮಳ ಬೆಂಗಳೂರಿಗೂ ಬಂದಿತ್ತು. ಮೈಸೂರು ಆಕಾಶವಾಣಿಯಲ್ಲಿ ಹುಟ್ಟಿದ ಕಸ್ತೂರಿಯವರ ಬಗೆಗಿನ ಒಂದು ದಂತಕತೆ: ಅಲ್ಲಿ ಕಸ್ತೂರಿ Assistant Station Superintendant-ASS. ಕಸ್ತೂರಿಯವರಿಗೆ ಮೇಲಿನವರಿಂದ ಬರುವ ಕಾಗದಗಳ ಮೇಲೆ ಕೇವಲ ASS ಎಂದಿದ್ದರೆ ಕೆಳಗಿನಿಂದ ಬರುವ ಕಾಗದಗಳ ಮೇಲೆ ASS may please see ಎನ್ನುವ ಮರ್ಯಾದೆಯುತ ಒಕ್ಕಣೆ. ಒಂದು ದಿನ ಅವರು ಹಿರಿಯ ಅಧಿಕಾರಿಗಳನ್ನು ಎರಡು ಕಡೆಯಿಂದಲೂ ಕತ್ತೆಯೆಂದು ಕರೆಸಿಕೊಂಡು ಸಾಕಾಗಿದೆ ಏನಾದರು ಮಾಡಿ ಎಂದು ಕೇಳಿಕೊಂಡರಂತೆ. ಮುಂದೆ ಈ ಹುದ್ದೆ Assistant Station Director ASD - ಆಯಿತು.

ಇಲ್ಲಿರುವ ಕಸ್ತೂರಿಯವರ 'ನನ್ನ ಬೆನ್ನು' ನನ್ನ ದೃಷ್ಟಿಯಲ್ಲಿ ಕನ್ನಡದ ಒಂದು ಶ್ರೇಷ್ಠ ನಗೆ ಪ್ರಬಂಧ.

# ನನ್ನ ಬೆನ್ನು

– ನಾ. ಕಸ್ತೂರಿ

''ಸ್ವಾಮಿ!''

ನಾನು ಹಿಂತಿರುಗಿ ನಿಂತೆ. ಹಲ್ಲು ಕಿರಿಯುತ್ತ ಬಲಗೈಯನ್ನು ನೀಡುತ್ತ, ಮಧ್ಯವಯಸ್ಕರೊಬ್ಬರು ನನ್ನೆಡೆಗೆ ಓಡಿ ಬರುತ್ತಿದ್ದರು. ಎಷ್ಟೋ ದಿನಗಳ ವಿರಹದಿಂದ ತಪಿಸಿದವರಂತೆ, ಕಡೆಗೂ ತಮ್ಮ ಪ್ರೇಮಪಾತ್ರ ಕೈಗೆ ಸಿಕ್ಕಿದವನಂತೆ, ಅವರ ಕಣ್ಣುಗಳು ಅರಳಿದ್ದುವು. ನನ್ನ ಹಿಂದೆಯೇ ಅವರು ಬಹುದೂರ ಓಡಿ ಬಂದಿರಬೇಕು. ಏಕೆಂದರೆ, ಅವರು ಬೆವರುತ್ತ ಬುಸುಗುಟ್ಟುತ್ತ, ಏದುತ್ತ ತಮ್ಮ ಮೈಯನ್ನು ನೂಕಿಕೊಂಡು ವೇಗವೇಗವಾಗಿ ಬರುತ್ತಿದ್ದರು.

ಧಾರವಾಡ ನನಗೆ ತೀರ ಹೊಸದು. ಯಾವುದೋ ಒಂದು ಅಗತ್ಯ ಕೆಲಸಕ್ಕಾಗಿ ನಾನು ಅಲ್ಲಿಗೆ, ಆದಿನ ಬೆಳಿಗ್ಗೆ ಹೋಗಿ ಸೇರಿದ್ದೆ. ಅಲ್ಲಿ ನನಗೆ ಪರಿಚಿತರು ಯಾರೂ ಇರಲಿಲ್ಲ. ಆದರೂ ನನ್ನ ಬೆನ್ನ ಹಿಂದೆ ಗುರುತಿಸಿದ ಮಹನೀಯ ಯಾರು, ಎಂದು ಅರಿಯಲು ನಾನೂ ಕುತೂಹಲನಾದೆ. ''ಸ್ವಾಮಿ!'' ಎನ್ನುತ್ತ ಅವರು ನನ್ನ ಸಮೀಪಕ್ಕೆ ಬಂದರು. ನನ್ನನ್ನು ಹತ್ತಿರದಿಂದ ನೋಡಿದರು... ಚಾಚಿದ ಕೈ ಹಿಂದಕ್ಕೆ ಹೋಯಿತು. ಅರಳಿದ ಕಣ್ಣುಗಳು ಬಾಡಿದವು... ''ಕ್ಷಮಿಸಿ! ಗುರುತು ತಪ್ಪಿತು! ತಮ್ಮನ್ನು ನಾನು ಬೇರೊಬ್ಬರು ಎಂದು ತಿಳಿದುಕೊಂಡುಬಿಟ್ಟೆ!'' ಎಂದು ಹೇಳುತ್ತ, ನಾಚಿ ತಲೆತಗ್ಗಿಸಿ, ಅವರು ಹಿಂದಕ್ಕೆ ನಡೆದರು.

ನಾನು ನನ್ನ ದಾರಿ ಹಿಡಿದೆ. ಆತನ ಮೇಲೆ ನನಗೆ ಕೋಪ ಬರಲಿಲ್ಲ. ಏಕೆಂದರೆ, ಇಂಥ ಅನುಭವ ನನಗೆ ಇದುವರೆಗೆ ನೂರಾರು ಆಗಿವೆ. ನನ್ನ ಬೆನ್ನಿಗೆ ಏನೋ ಒಂದು ರೀತಿಯ ವಿಶೇಷ ಗುಣವಿದೆ. ಅದನ್ನು ಕಂಡು, ಅನೇಕರು ಮೋಸಹೋಗಿದ್ದಾರೆ. ಅದರ ಅಗಲ, ರಚನೆ, ಬಾಗು, ಬಿಗಿ, ಅದರ ಮೇಲೆ ನನ್ನ ತಲೆ ಬುರುಡೆ ಪ್ರತಿಷ್ಠಿತವಾಗಿರುವ ಭಂಗಿ, ಅವೆರಡಕ್ಕೂ ನಡುವೆ ಬೆಳೆದಿರುವ ನನ್ನ ಕತ್ತಿನ ಉದ್ದ, ಸುತ್ತಳತೆ, ಬಳುಕು, ಬಿಂಕ; ಅಲ್ಲದೆ, ನನ್ನ ನಡಿಗೆಯ ಠೀವಿ, ಠೇಂಕಾರ, ಅದರ ಒಯ್ಯಾರ; ಇವೆಲ್ಲದರ ಮೂಲಕ ಕರ್ನಾಟಕದ ಒಳಗೂ ಹೊರಗೂ ಎಲ್ಲ ಊರುಗಳಲ್ಲೂ ಜನ ನನ್ನನ್ನು ಬೇರೊಬ್ಬನೆಂದು ಗುರುತಿಸಿ ಮೋಸ ಹೋಗಿದ್ದಾರೆ. ನಸುಕಿನಲ್ಲಿ ಮಾತ್ರವೇ ಅಲ್ಲ, ಉರಿ ಹಗಲಲ್ಲೂ ಮೋಸ ಹೋಗಿದ್ದಾರೆ; ನಿಬಿಡ ಸ್ಥಳಗಳಲ್ಲಿ ಮಾತ್ರವಲ್ಲ, ನಿರ್ಜನ ಪ್ರದೇಶಗಳಲ್ಲೂ ಕೂಡ.

ಆದರೆ, ಒಂದು ಸೋಜಿಗ, ನನ್ನೆದುರು, ನನಗಭಿಮುಖವಾಗಿ ಬರುವವರೊಬ್ಬರೂ ನನ್ನನ್ನು ಬೇರೆಯವನೆಂದು ತಿಳಿಯುವುದೇ ಇಲ್ಲ. ನನ್ನ ಹಣೆ, ಮುಖ, ಮೂಗು ಎದೆ ಮುಂತಾದ ಮುಂಭಾಗಕ್ಕೆ ಒಂದು ವ್ಯಕ್ತಿತ್ವ, ಒಂದು ವೈಶಿಷ್ಟ್ಯ ಇದೆ! ಅದು ನನ್ನದೇ ಆದ, ಬೇರೊಬ್ಬರಿಗೂ ಇಲ್ಲದ ರೂಪರೇಖೆಗಳಿಂದ ವಿರಾಜಿಸುತ್ತದೆ. ನನ್ನನ್ನೆದುರುಗೊಳ್ಳುವವರಿಗೆಲ್ಲ ನಾನು ನಾನೇ!.... ನನ್ನನ್ನು ಹಿಂಬಾಲಿಸುವವರಿಗೆ ಮಾತ್ರ

ನಾನು ಅವರವರ ಕಲ್ಪನಾಶಕ್ತಿಯಂತೆ, ಬೇರೆ ಬೇರೆ ವ್ಯಕ್ತಿಯಾಗಿ ಕಾಣುತ್ತೇನೆ. ಇದು ನನ್ನ ದೌರ್ಭಾಗ್ಯ; ನನ್ನದೇ ಆದ ನನ್ನತನ.

''ಸ್ವಾಮಿ!'', ''ಸಾರ್'', ''ರೀ'', ''ಲೋ'', ''ಏ, ಅಪಾ'', ''ಏ! ಅಜ್ಜ'', ''ನಿಂತುಕೊಳ್ರಣ್ಣ'', ''ಹಲೋ!'', ''ಜೀ'' - ಎಂಬ ಬಗೆಬಗೆಯ ಸಂಬೋಧನಾಪದಗಳನ್ನೆಸೆದು, ಜನ ನನ್ನ ಬೆನ್ನನ್ನು ಕೂಗಿ ನಿಲ್ಲಿಸಿದ್ದಾರೆ. ನಿಂತು, ಹಾಗೆ ಕರೆದವರನ್ನು ನಾನು ತಿರುಗಿ ನೋಡುವುದೇ ತಡ, ಅವರು ಪೆಚ್ಚಾಗಿ, ಜೋಲುಬಿದ್ದು, ನುಸುಳಿ, ಕ್ಷಮಾಪಣೆ ಕೇಳಿ. ತಪ್ಪಿಸಿಕೊಳ್ಳುವರು. ಬೆನ್ನೇ ಇಲ್ಲದೆ ನಾನು ದ್ವಿಮುಖನಾಗಿ ಹುಟ್ಟಿದ್ದರೆ, ನನ್ನಿಂದಾಗುತ್ತಿರುವ ಈ ಕಾಟ ತಪ್ಪುತ್ತಿತ್ತಲ್ಲಾ, ಎಂದು ಅನೇಕ ಸಾರಿ ನನಗೆ ಅನ್ನಿಸಿದೆ. ಆದರೇನು ಮಾಡುವುದು? ಅಸಹ್ಯ ಮನುಭೋಕ್ತವ್ಯಂ! ಅವರೂ ಅಷ್ಟೆ; ನಾನೂ ಅಷ್ಟೆ!

ಧಾರವಾಡದಲ್ಲಿ ನನ್ನನ್ನು ಹಿಂಬಾಲಿಸಿದ ಮಹನೀಯರು ತೆಪ್ಪಗೆ ಹಿಂದಕ್ಕೆ ಪಲಾಯನ ಮಾಡಿದರು. ಆದರೆ ಅನೇಕರು ಹಾಗೆ ಮಾಡುವುದಿಲ್ಲ. ಅವರಿಗೆ ಆಶಾಭಂಗ ಉಂಟುಮಾಡಿದ್ದಕ್ಕೆ ಅವರು ನನ್ನ ಮೇಲೆ ರೇಗಾಡುವರು. ''ಇದ್ಯಾಕ್ರಿ ಹಿಂಗಾದಿರಿ! ಹಿಂದೊಂದು ಮುಂದೊಂದು, ಬೂಟಾಟಿಕೆ ಮಾಡಿ ಆಡಬೇಡ್ರಿ'' ಎಂದು ಕೋಪ ಕಾರುವರು. ನನ್ನ ಗ್ರಹಚಾರವನ್ನೇ ಶಪಿಸುತ್ತ, ನಾನು ಕಾಲಿಗೆ ಬುದ್ಧಿ ಹೇಳುವೆ. ಯಾರಾದರೂ ಹಿಂದೆ ಬಂದು ನನ್ನನ್ನು ಬೇರೊಬ್ಬನೆಂದೆಣಿಸಿ, ಅವರಿಗೆ ಸಲ್ಲಿಸಬೇಕಾದ ಪೂಜೆಯನ್ನು ನನಗರ್ಪಿಸಿ ಎರಡು ಶಾಪ ಬಾರಿಸಿದರೆ, ಗತಿ ಏನಪ್ಪ ಎಂದು ಹೆದರುವೆ.

ಎಂಟು ಹತ್ತು ಬಾರಿ, ನಾನು ನನ್ನ ಸಂಬೋಧಕರನ್ನು ಮಾತನಾಡಿಸಿದ್ದೂ ಉಂಟು. ''ಚಿಂತೆ ಇಲ್ಲ! ನೀವೆಣಿಸಿದ ವ್ಯಕ್ತಿ ಅಲ್ಲದಿದ್ದರೂ ನಾನೂ ಒಬ್ಬ ವ್ಯಕ್ತಿ; ಸಂಸಾರಿ; ಮಕ್ಕಳೊಂದಿಗ; ತಾವು ನನ್ನನ್ನು ಯಾರು ಅಂತ ತಿಳಿದಿರಿ?'' ಎಂದು ಕೇಳಿದ್ದೇನೆ. ಆಗ, ನನಗೆ ಬಗೆ ಬಗೆಯ ಉತ್ತರಗಳು ಸಿಕ್ಕಿವೆ. ಚಿತ್ರದುರ್ಗದ ಒಬ್ಬರು ವರ್ತಕರು ನನ್ನನ್ನು ಬಸ್ ಮಾಲಿಕರೆಂದು ಬಗೆದರಂತೆ; ಬ್ಯಾಡ್ಗಿಯಲ್ಲಿ ಮತ್ತೊಬ್ಬರಿಗೆ ನಾನು ಸ್ಟೇಷನ್ ಮಾಸ್ತರಾಗಿ ಕಂಡೆ; ಮೈಸೂರಲ್ಲಿ ಅರಸುಗಳೊಬ್ಬರು ನನ್ನನ್ನು ಅಕ್ಕಸಾಲಿಗನೆಂದು ಮೋಸಹೋದರು; ಅನೇಕರು ನನ್ನನ್ನು ತಮಗೆ ಸಾಲ ಹಿಂದಕ್ಕೆ ಕೊಡಬೇಕಾದ ತಮ್ಮ ಹಳೆಯ ಗೆಳೆಯನೆಂದು ಭಾವಿಸಿದ್ದರು. ಸಾಲ ಹಿಂದಕ್ಕೆ ಕೊಟ್ಟು ಮುಟ್ಟಿಸಿ ತೀರಿಸಬೇಕಾದ ಸಾಹುಕಾರ ಎಂದು ಒಬ್ಬರೂ ನನ್ನನ್ನು ತಿಳಿಡುಕೊಳ್ಳದೆ ಇದ್ದುದೇ ಆಶ್ಚರ್ಯ.

ಬೆನ್ನ ವೈಶಿಷ್ಟ್ಯದಿಂದ ನನಗೆ ಹೆಚ್ಚು ತೊಂದರೆಯಾಗುತ್ತಿರುವುದು ಬಸ್ ಪ್ರಯಾಣದಲ್ಲಿ! ನನ್ನ ಹಿಂದಿನ ಸೀಟಿನಲ್ಲಿ ಮಂಡಿಸಿರುವ ಮಹಾಜನಗಳ ಪೈಕಿ ಪ್ರತಿ ಬಸ್‌ನಲ್ಲೂ ಒಬ್ಬಿಬ್ಬರು ನನ್ನನ್ನು ''ಓ ಹೋ ಹೊ! ತಿಮ್ಮಣ್ಣಯ್ಯನವರೆ ಎಲ್ಲಿಗೆ ಹೊರಟಿರಿ?'' ಎಂದು ಮುಂತಾಗಿ ಮಾತು ತೆಗೆದು, ಆ ಉತ್ಸಾಹದಲ್ಲಿ ಸಲಿಗೆಯಿಂದ ಬೆನ್ನ ಮೇಲೆ ಬಲವಾಗಿ ಗುದ್ದಿದ್ದೂ ಉಂಟು! ಸರಕ್ಕನೆ ನಾನು ಹಿಂತಿರುಗುವಾಗ ಅವರ ಮುಖದಲ್ಲಿ ಆಶ್ಚರ್ಯವೂ ನಿರಾಶೆಯೂ ಒಮ್ಮೆಲೆ ಮೂಡುವುದನ್ನು ನಾನು ನೂರಾರು ಬಾರಿ ಕಂಡಿದ್ದೇನೆ. ಇಂಥ ಅನಾಹುತಗಳನ್ನು ತಪ್ಪಿಸುವದಕ್ಕಾಗಿ ನಾನು ಮೊದಲೇ ಕುಳಿತ ಕಡೆಯಿಂದ ಎದ್ದು, ಇಡೀ ಬಸ್ಸನ್ನು ಒಂದು ಸಲ ಅವಲೋಕಿಸಿ ಎಲ್ಲರಿಗೂ ನನ್ನ

ಮುಖವನ್ನು ಚೆನ್ನಾಗಿ ತೋರಿಸಿ, ಮತ್ತೆ ಕುಳಿತುಕೊಳ್ಳುವ ಅಭ್ಯಾಸ ಇಟ್ಟುಕೊಂಡಿದ್ದೇನೆ. ಆದರೂ ನಡುವೆ ಬಸ್ ಹತ್ತಿದವ ಯಾವನಾದರೂ ಒಬ್ಬ ನನ್ನನ್ನು ಚೆನ್ನಾಗಿ ನೋಡಿ ''ಅಲ್ಲಿ ನೋಡಿರಿ! ನಮ್ಮ ಪಟೇಲರು ಮುಂದಿನ ಸೀಟ್‌ನಲ್ಲಿ ತೆಪ್ಪಗೆ ಕೂತಿರೋದನ್ನ... ತುಟಿಪಿಟಕೆನ್ನದೆ!'' ಎಂದು ಕೂಗೇ ಕೂಗುತ್ತಾನೆ; ಪೆಟ್ಟು ತಿಂದೇ ತಿನ್ನುತ್ತೇನೆ!

ನನಗೆ ಹೆಚ್ಚು ವ್ಯಥೆಯನ್ನು ಕೊಡುವ ಅಂಶವೇನಂದರೆ, ಇದುವರೆಗೂ ನನ್ನನ್ನು ಯಾರೂ ಗಣ್ಯವ್ಯಕ್ತಿಗಳಾದ ಮಂತ್ರಿ, ಕಲೆಕ್ಟರ್, ಪೋಲೀಸ್ ಇನ್‌ಸ್ಪೆಕ್ಟರ್, ರೇಷನಿಂಗ್ ಆಫಿಸರ್, ಅಡ್ವೋಕೇಟ್ ಇತ್ಯಾದಿಯೆಂದು ಮೋಸ ಹೋಗಿಯೇ ಇಲ್ಲ. ಏಟು ತಿಂದರೂ ಉಂಗುರ ಧರಿಸಿರುವ ಕೈಯಿಂದಾದರೆ, ತಿಂದವನೂ ತುಸು ತೇಗುತ್ತಾನೆ. ''ಕ್ಷಮಿಸಿ ತಮ್ಮನ್ನು ನಾನು ನಮ್ಮೂರ ಶಾಲಾ ಮಾಸ್ತರು ಅಂತ ತಿಳಿದೆ'' ಎಂದು ಒಬ್ಬರು ನಡು ರಸ್ತೆಯಲ್ಲಿ ನಿಲ್ಲಿಸಿಕೊಂಡು ಹೇಳಿದರು,. ಅಂದು ನಿದ್ರೆ ಹೇಗೆ ಬರುತ್ತೆ? ಊಟ ಹೇಗೆ ಸೇರುತ್ತೆ?

ನಿಜವಾದ ಮಂತ್ರಿಗಳಾಗಲು ದೇವರು ಹಣೆಯಲ್ಲಿ ಬರೆಯಲಿಲ್ಲ. ಬೆನ್ನಲ್ಲೂ ಬರೆಯಲಿಲ್ಲವೆ? ಅಪ್ಪಿ ತಪ್ಪಿ ಒಬ್ಬನ ಮೆಳ್ಳಗಣ್ಣಿಗಾದರೂ ಹಾಳು ಬೆನ್ನು ಮಂತ್ರಿಯ ಬೆನ್ನ ಹಾಗೆ ಕಾಣಿಸಬಾರದೆ? ಅಗಲಕ್ಕೇನೂ ಕಡಿಮೆ ಇಲ್ಲ, ಹಾಳಾದ್ದಕ್ಕೆ! ಇಡೀ ಪ್ರಾಂತದ ಭಾರವನ್ನೆಲ್ಲ ಹೇರಿದರೂ ಹೊರುವಷ್ಟು ಧಡೂತಿ ಇದೆ; ಭುಜಬಲವಿದೆ, ಪರಾಕ್ರಮ ಕಡಿಮೆಯಾದರೂ. ಆದರೂ ಅವಲಕ್ಷಣ ಜಾತಕ, ಪ್ರತಿಭಾವಂತರಾದ ಒಬ್ಬರ ಬೆನ್ನ ಹಾಗೂ ಇಲ್ಲ, ಹಾಳಾದ್ದು.

ಒಬ್ಬ ಮಾತ್ರ, ಒಂದೇ ಒಂದು ದಿನ ಮಾತ್ರ, ಬಳ್ಳಾರಿಯಲ್ಲಿ ಹಿಂದಿನಿಂದ ಚಪ್ಪಾಳೆ ತಟ್ಟಿ 'ಸ್ವಾಮಿ' ಅಂತ ಕೂಗಿ, ನನ್ನ ಬೆನ್ನ ಹಿಂದೆ ಕನ್ನಡ ಕವಿಗಳೊಬ್ಬರ ಹೆಸರನ್ನು ಎತ್ತಿದ! ನಾನು ಬಿರಬಿರನೆ ಮುಂದಕ್ಕೆ ನಡೆದೆ, ಇನ್ನೂ ಎರಡುಮೂರು ಬಾರಿಯಾದರೂ ಆತ ಆ ಕವಿಯ ಹೆಸರನ್ನು ಹೇಳಿ ಆಹ್ವಾನಿಸಲಿ, ಎಂದು! ನನಗೆ ಪರಮಾನಂದವಾಯಿತು. 'ಭಲಾ! ನನ್ನ ಬೆನ್ನಿಗೆ ಈತ ಇಂಥ ಪ್ರಖ್ಯಾತ ಕವಿಯ ಹೆಸರನ್ನು ಅಂಟಿಸುತ್ತಿರುವನಲ್ಲಾ! ಈ ದಿನವೇ ಸುದಿನ!' ಎಂದು ಹಿಗ್ಗಿದೆ. ಕವಿ ಎಂಬ ಸ್ಥಾನ ಅಷ್ಟು ಲಾಭದಾಯಕವಲ್ಲದಿದ್ದರೂ, ಕೆಲವೇ ತಲೆಕೆಟ್ಟವರಿಗೆ ಮಾತ್ರ ಆ ತೆರನ ಜನರ ಪರಿಚಯ ಇರುವದಾದರೂ ಋಷಿ ಎಂಬ ಬಿರುದಿಗೆ ಅರ್ಹರಾದ ತಂಡಕ್ಕೆ ಸೇರಿದವರ ಆ ಹೆಸರು ನನಗೆ ಕರ್ಣರಸಾಯನವಾಗಿತ್ತು. ಕಡೆಗೆ, ಆತ ಓಡೋಡುತ್ತ ನನ್ನ ಪಕ್ಕಕ್ಕೆ ಬಂದ. ನನ್ನ ಮುಖವನ್ನು ಅವನೆದುರು ಹಿಡಿಯದೆ ವಿಧಿ ಇಲ್ಲ ಎಂಬ ಘಟ್ಟಕ್ಕೆ ಬಂತು, ಸನ್ನಿವೇಶ. ಆಗ ಅವನು ಎಲ್ಲರಂತೆ ನಾಚಿ ತಲೆ ತಗ್ಗಿಸಿ ಹಲ್ಲಿಕಿರಿತವನ್ನು ನುಂಗಿಕೊಂಡ. ''ಕ್ಷಮಿಸಿ! ತಮ್ಮನ್ನ ನಾನು ನಮ್ಮ ಕರ್ನಾಟಕ ಸಂಘದ ಸೆಕ್ರೆಟರಿಗಳು ಅಂತ ತಿಳಿದೆ; ತಪ್ಪಾಯ್ತು; ಬೇಂದ್ರೆಯವರು ಈ ಊರಿಗೆ ಬರುತ್ತಾರಂತಲ್ಲಾ, ಎಂದು? ಅಂತ ತಮ್ಮಿಂದ ವರ್ತಮಾನ ತಿಳಿದುಕೊಳ್ಳೋಣ ಎಂದು ಕೂಗಿದೆ'' ಎಂದ. ತುಸು ಹೊತ್ತಾದರೂ ನನ್ನನ್ನು ಬೇಂದ್ರೆ ಎಂದು ಮೋಸ ಹೋದನಲ್ಲಾ ಒಬ್ಬ ಕನ್ನಡಿಗ, ಎಂಬ ನನ್ನ ಸಂತೋಷ, ಬೇಗನೆ ಕೊನೆಗಂಡಿತು... ಅಂತೂ ಬೆನ್ನು ತೋರಿಸಿದರೆ, ಬೇಸ್ತು....

# ಕಡಲಾಚೆಯ ಕುಡಿನೋಟ

- ಶಿವು

ನಾವು ಇಪ್‌ಸ್ವಿಚ್ ಸ್ಟೇಷನ್ ತಲುಪಿದಾಗ ಸಮಯ ಒಂಭತ್ತೂ ಮುಕ್ಕಾಲು. 'ಮಹಾಪಟ್ಟಣದಲ್ಲಿ ಒಂದು ದಿನ' ಕಳೆಯಲು ಬಾರ್ಬರಾ ಮತ್ತು ನಾನು ಅಂದು ಬೆಳಗ್ಗೆ ಲಂಡನ್‌ಗೆ ಹೊರಟಿದ್ದೆವು. ನಮ್ಮ ಟ್ರೇನ್ ಹೊರಡಲು ಇನ್ನೂ ಕಾಲುಘಂಟೆ ಇದ್ದುದರಿಂದ ದಾರಿಯಲ್ಲಿ ಕುಡಿಯಲು ಕಾಫಿಕೊಳ್ಳಲು ಸ್ಟೇಷನ್ನಿನ ರೆಸ್ಟುರಾಗೆ ಹೋದೆವು. ಆ ದೇಶದಲ್ಲಿ ಕಾಫಿ ಖರೀದಿಸುವುದೇ ಒಂದು ಮೋಜು. ಮೂರು ಅಳತೆಗಳಲ್ಲಿ (ಸ್ಮಾಲ್, ಮೀಡಿಯಂ ಹಾಗೂ ಲಾರ್ಜ್) ಬರುವ ಈ ಕಾಫಿಗಳು ಕೇವಲ ಡಿಕಾಕ್ಷನ್ ಅಷ್ಟೇ. ಅದೂ ಸ್ವಲ್ಪವೇ ಬೆಚ್ಚಗಿರುವ ತೆಳುವಾದ ಡಿಕಾಕ್ಷನ್. ಸ್ಮಾಲ್ ಕೇಳಿದರೆ ಒಂದು ಕೊಳಗದಂತಹ ಕಾಗದದ ಲೋಟದಲ್ಲಿ ಈ ದ್ರವ್ಯ ವಿಶೇಷ ನಿಮಗೆ ಸಿಗುತ್ತದೆ. ಇದನ್ನು ಪಡೆದು, ಹತ್ತಿರದ ಬಡುವಿನಲ್ಲಿ ಇಟ್ಟಿರುವ ಹಾಲಿನ ಡಬ್ಬಿ ಸಕ್ಕರೆಯ ಪೊಟ್ಟಣ ಇವುಗಳನ್ನು ಉಚಿತವಾಗಿ ತೆಗೆದುಕೊಂಡು , ಪ್ರಯಾಣದುದ್ದಕ್ಕೂ ಆನಂದದಿಂದ ಸವಿಯುತ್ತಾರೆ ಇಲ್ಲಿನ ಬಿಳಿಯರು. ಬಿಳಿಯರು ಅಂತ ಯಾಕಂತೀರೀ, ಆ ದೇಶದ ಜನರು, ಅನ್ನುಕ್ಕಾಗುಲ್ಲವೇ ಅಂತ ನೀವು ಕೇಳಬಹುದು. ನಿಜ, ಚರ್ಮದ ಬಣ್ಣದಿಂದ ಒಂದು ಜನತೆಯನ್ನು ಗುರುತಿಸುವುದು ವರ್ಣದ್ವೇಷದ ಸಂಕೇತ ಎಂಬುದು ನನಗೆ ತಿಳಿದಿದೆ. ಆದರೂ ನೋಡಿ, ಈ ದೇಶವನ್ನು ಪ್ರವೇಶಿಸಿ, ಹೀಥ್ರೋ ವಿಮಾನ ನಿಲ್ದಾಣದಲ್ಲಿ ಇಳಿದ ತಕ್ಷಣ ನಮ್ಮಂತಹ ಕಂದು ಬಣ್ಣದ ಜನರಿಗೆ ತಮ್ಮ 'ಬೇರೇತನ' ಚೆನ್ನಾಗಿ ಮನದಟ್ಟಾಗುತ್ತದೆ. ನಾನು ಹೋಗುವ ಸಮಯಕ್ಕೆ ಸ್ವಲ್ಪ ಮುಂಚೆ ಇಲ್ಲಿನ ಟ್ಯೂಬ್ ಟ್ರೇನುಗಳಲ್ಲಿ ಸ್ಫೋಟಗೊಂಡ ಬಾಂಬ್ ಗಳಲ್ಲಿ ಏಷ್ಯನ್ ಮುಸ್ಲಿಮರ ಕೈವಾಡವಿದ್ದದ್ದು ಒಂದು ಕಾರಣವಾದರೆ, ಇಲ್ಲಿಯೇ ಹುಟ್ಟಿಬೆಳದ ಏಷ್ಯನ್ ತರುಣತರುಣಿಯರಲ್ಲಿ ಕಂಡುಬರುವ ಒಂದು ಹೊಸ ಸ್ವಾಭಿಮಾನ, ಬಿಳಿಯರನ್ನು ಕಂಡರೆ ಇರುವ ತಾತ್ಸಾರ, ಇದರಿಂದ ಉಂಟಾದ ಪರಸ್ಪರ ವಿಮುಖತೆಯೂ ಒಂದು ಮುಖ್ಯಕಾರಣ. ಒಟ್ಟಿನಲ್ಲಿ, ಬಾಂಬ್ ವಿಷಯದಲ್ಲಿ ಏಷ್ಯನರ ಬಗ್ಗೆ ಟಿವಿಯಲ್ಲಿ ಯಾವ ಸಮಾಚಾರ ಬಿತ್ತರವಾದರೂ, ಹೆಗಲು ಮುಟ್ಟಿ ನೋಡಿಕೊಳ್ಳುವ ಹಾಗಾಗುತ್ತೆ ನಮ್ಮಂತಹ ಕೆಲವರಿಗೆ. ಇರಲಿ.

ಟ್ರೇನು ಹತ್ತಿ, ಹರಟಲು ಅನುಕೂಲವಾಗಲೆಂದು ಬಾರ್ಬರಾ ಮತ್ತು ನಾನು ಇದಿರು ಬದರಾಗಿ ಕುಳಿತೆವು. ಬಾರ್ಬರಾ ಪಕ್ಕದಲ್ಲಿ ಕುಳಿತಿದ್ದ ಯುವತಿ, ತನ್ನ ದಿನಪತ್ರಿಕೆಯನ್ನು ಮುಂದೆ ಹರಡಿಕೊಂಡು 'ಸುಡುಕೊ' ಸಂಖ್ಯಾಚಕ್ರಬಂಧವನ್ನು ಬಿಡಿಸುವುದರಲ್ಲಿ ಮಗ್ನಳಾದಳು. ಈ ಸುಡುಕೊ ಬಿಡಿಸುವ ಪ್ರವೃತ್ತಿ ಈ ದೇಶದಲ್ಲಿ ಕಾಳ್ಗಿಚ್ಚಿನಂತೆ ಹರಡಿದೆ. ಇಪ್‌ಸ್ವಿಚ್ಚಿನಿಂದ ಲಂಡನ್‌ಗೆ ಕೇವಲ ಐವತ್ತು ನಿಮಿಷಗಳ ಪಯಣ. ಲಂಡನ್ನಿಗೆ ಇಪ್ಪತ್ತು ಮೈಲಿಗಳಿರುವಾಗಲೇ, ದೂರದಲ್ಲಿ ಅನೇಕ ಬುಲ್‌ಡೋಜರುಗಳು ತಮ್ಮ ಮಣ್ಣೆತ್ತುವ ಕಾರ್ಯವನ್ನು ಬಿರುಸಾಗಿ ನಡೆಸಿದ್ದವು. 'ಕೂಮರ್, ಲಂಡನ್‌ನಲ್ಲಿ ಒಲಂಪಿಕ್ ನಡೆಯುವುದು ನಿಶ್ಚಯವಾದ ತಕ್ಷಣ ನಮ್ಮ ಸರ್ಕಾರ, ಈ ಪಟ್ಟಣದ ಅತಿ ಕಡಿಮೆ ಅಭಿವೃದ್ಧಿಹೊಂದಿರುವ ಬಡಾವಣೆಗಳನ್ನು ಗುರುತಿಸಿ, ಆ ಬಡಾವಣೆಗಳಲ್ಲೇ ಒಲಂಪಿಕ್ ಸ್ಟೇಡಿಯಂ ಗಳನ್ನು ಕಟ್ಟಲು ನಿರ್ಧರಿಸಿದರು. ಇದರಿಂದ ಒಲಂಪಿಕ್ ಹಣ

ಸದ್ವಿನಿಯೋಗವಾಗಿ, ಪಟ್ಟಣಕ್ಕೆ ಲಾಭವಾಗುವುದಂತೂ ಖಂಡಿತ. 'ಎಂದೆಲ್ಲಾ ವಿವರಿಸಿದಳು ಬಾರ್ಬರಾ. ಅಷ್ಟುಹೊತ್ತಿಗೆ ಸ್ವಲ್ಪದೂರದಲ್ಲಿ 'ಘರ್ಕಿನ್' ಕಟ್ಟಡ ಕಣ್ಣಿಗೆ ಬಿತ್ತು. ಇದೊಂದು ಸೌತೇಕಾಯಿಯ ಆಕಾರದ ಎತ್ತರದ ಕಟ್ಟಡ. ಸೌತೇಕಾಯನ್ನು ಹೋಲುವ ಒಂದು ಇಂಗ್ಲಿಷ್ ತರಕಾರಿ ಘರ್ಕಿನ್. ಅದೇ ಹೆಸರೇ ಕಟ್ಟಡಕ್ಕೆ ನಿಂತುಬಿಟ್ಟಿದೆ.

ಯೂಸ್ಟನ್ ಸ್ಟೇಷನ್ನಿನಲ್ಲಿ ನಾವು ಇಳಿದಾಗ ಹನ್ನೊಂದು ಘಂಟೆ. ಹಿತವಾದ ಬೆಚ್ಚಗಿನ ಬೆಳಗಿನ ಬಿಸಿಲು ಈ ಮಹಾಪಟ್ಟಣದ ವಾರಣವಾದ ಹಾದಿಬೀದಿಗಳಲ್ಲಿ ನಡೆದಾಡಲು ಆಹ್ವಾನಿಸುತ್ತಿತ್ತು. ನಾವು ಸ್ಟೇಷನ್ನಿನಿಂದ ನೇರವಾಗಿ ಥೇಮ್ಸ್ ನದಿಯ ತೀರಕ್ಕೆ ನಡೆದೆವು. ನದಿಯ ಎಡದಂಡೆಯುದ್ದಕ್ಕೂ ಒಂದು ಪಾದಚಾರಿಗಳ ಹಾದಿ ಇದೆ. ರಾಣಿ ಎಲಿಸಬೆತ್ತಳ ಕಿರೀಟಧಾರಣೆಯ ರಜತ ಮಹೋತ್ಸವವನ್ನು ಆಚರಿಸಲು ಈ ಜ್ಯೂಬಿಲಿ ವಾಕ್ ಅನ್ನು ನಿರ್ಮಿಸಿದರಂತೆ.

ಮೆಟ್ಟಲುಗಳನ್ನು ಇಳಿದು, ನದಿಯ ತೀರದ ಪಕ್ಕದಲ್ಲೇ ಸರಿದು ಹೋಗುತ್ತಿದ್ದ ವಾಕ್ ಸೇರಿ ನಡೆಯಲು ಪ್ರಾರಂಭಿಸಿದೆವು. ದಾರಿಯುದ್ದಕ್ಕೂ ಬಾರ್ಬರಾಳ ವೀಕ್ಷಕ ವಿವರಣೆ ಹಾಗೂ ನಾಸ್ಟಾಲ್ಜಿಯಾ. ' ಅಲ್ಲಿ ನೋಡು ಆ ಸೇತುವೆ ಇದೆಯಲ್ಲಾ, ಅಲ್ಲೇ ನಾನು ನನ್ನ ತಾರುಣ್ಯದಲ್ಲಿ ರಾತ್ರಿ ಹನ್ನೆರಡು ಘಂಟೆಯಲ್ಲಿ ಮೋಟರ್‌ಸೈಕಲ್ಲಿನಿಂದ ಬಿದ್ದದ್ದು. ನನ್ನ ಬಾಯ್ ಫ್ರೆಂಡ್ ಅಂದು ಸಂಜೆಯ ನೃತ್ಯಕೂಟದ ನಂತರ, ಮನೆಗೆ ಬಿಡಲೇ ಅಂತ ಕೇಳಿದ. ಈ ರೀತಿ ಆಹ್ವಾನಿಸಬೇಕಾದರೆ, ಅವನ ಬಳಿ ಕಾರ್ ಇರಲೇ ಬೇಕು ಅಂತ ನಿರ್ಧರಿಸಿ ನಾನು ಒಪ್ಪಿದೆ. ಹೊರಗೆ ಬಂದು ನೋಡಿದರೆ, ಮೋಟರ್‌ಸೈಕಲ್ಲು. ನನ್ನದೋ ಹೊಸಾ ಹೊಸ, ಸಿಲ್ಕ್ ಸ್ಕರ್ಟ್. ವಿಧಿಯಿಲ್ಲದೇ ಅವನ ಹಿಂದೆ ಪಿಲಿಯನ್ನಿನಲ್ಲಿ ಕುಳಿತೆ. ಈ ಸೇತುವೆ ಬಳಿ ಬಂದಾಗ ಹಾದಿಯಲ್ಲಿ ಎಣ್ಣೆ ಚೆಲ್ಲಿತ್ತು ಅಂತ ಕಾಣುತ್ತೆ. ಒಮ್ಮೆಲೇ ಮೋಟರ್‌ಸೈಕಲ್ ಹುಚ್ಚೆದ್ದ ಕುದುರೆಯಂತೆ ನೆಗೆಯಿತು. ನಾನು ನೆಲ ಕಚ್ಚಿದೆ. ಸಧ್ಯ ತೀವ್ರವಾದ ಗಾಯವೇನೂ ಆಗಲಿಲ್ಲ. ಪಾಪ, ಜಿಮ್‌ಗೆ ದಿಕ್ಕೇ ತೋಚಲಿಲ್ಲ. ಹೇಗೋ ಮನೆ ಸೇರಿಕೊಂಡೆ'

' ಓ ಅಲ್ಲಿ ನೋಡು, ಒಂದು ತೆಳ್ಳಗೆ ರಿಬ್ಬನ್ ತರಹ ನದಿಗೆ ಅಡ್ಡಲಾಗಿ ಮಲಗಿದೆಯಲ್ಲಾ ಅದೇ ಮಿಲಿನಿಯಂ ಬ್ರಿಡ್ಜ್. ಹೊಸ ಶತಮಾನವನ್ನು ಸ್ವಾಗತಿಸಲು ನಮ್ಮ ಸರ್ಕಾರ ಕಟ್ಟಿದ ಪಾದಚಾರಿ ಸೇತುವೆ. ಜನ ನಡೆಯಲು ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ, ಆ ಸೇತುವೆ ಹಾಗೂ ಹೀಗೂ ಡೋಲಾಯಮಾನವಾಗಿ ಅಲುಗಾಡಲು ಪ್ರಾರಂಭಿಸಿತು. ಹೆದರಿದ ಜನತೆ ಆ ಬ್ರಿಡ್ಜ್ ಅನ್ನು ಬಳಸುವುದನ್ನೇ ನಿಲ್ಲಿಸಿದರು. ಆಮೇಲೆ ಅದನ್ನ ದುರಸ್ತಿಪಡಿಸಿ, ಬಳಕೆಗೆ ತಂದರು ಅಂತಿಟ್ಕೊ. ಆದರೆ ಆ ಸೇತುವೆಯ ಹೆಸರು ವಿಬ್ಲಿ ವಾಬ್ಲಿ ಬ್ರಿಡ್ಜ್ (ಅಲುಗಾಟದ ಸೇತುವೆ) ಅಂತಾನೇ ನಿಂತುಬಿಟ್ಟಿದೆ. '


ನಾವು ನಡೆಯುತ್ತ ಸಾಗಿದ್ದಾಗ, ಪಕ್ಕದ ಸಂದಿನಿಂದ ಒಂದು ಮದುವೆ ಗುಂಪು ನಡೆಯುತ್ತಾ ನಮ್ಮ ಮುಂದೆ ಬಂತು. ಮದುಮಗ ಇಂಗ್ಲೀಷ್, ಮದುವಣಗಿತ್ತಿ ಚೀನಾದವಳಂತೆ ಕಾಣುತ್ತಿದ್ದಳು. ಗುಂಪಿನಲ್ಲೂ ಎರಡೂ ಬಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿತ್ತು. ನಾವೂ ಅವರೊಂದಿಗೇ ಹೆಜ್ಜೆ ಹಾಕಿದೆವು. ಹಾದಿ ಕಿರಿದಾಗಿದಾಗಿದ್ದುದರಿಂದ ಬೇರೇ ಮಾರ್ಗವೇ ಇರಲಿಲ್ಲಾ ಅನ್ನಿ. ನಡೆಯುತ್ತಾ, ನಡೆಯುತ್ತಾ, ಒಂದು ವೃತ್ತಾಕಾರದ ಕಟ್ಟಡವೊಂದು ಕಣ್ಣಿಗೆ ಬಿತ್ತು. ' ಕೂಮರ್, ಇದೇ ಗ್ಲೋಬ್

ಥಿಯೇಟರ್. ಷೇಕ್ಸ್‌ಪಿಯರನ ಕಾಲದಿಂದ ಇಲ್ಲಿ ಅವನ ನಾಟಕಗಳನ್ನು ಪ್ರಯೋಗಮಾಡುತ್ತಾ ಬಂದಿದ್ದಾರೆ. ನಾಟಕದ ಚರಿತ್ರೆಯಲ್ಲಿ ಆಸಕ್ತಿ ಉಳ್ಳವರಿಗೆ ಅತಿ ಮುಖ್ಯವಾದ ಚಾರಿತ್ರಿಕ ಸ್ಥಳವಿದು. ಇಲ್ಲೊಂದು ಒಳ್ಳೇ ರೆಸ್ಟುರಾ ಇದೆ. ಹೇಗಿದ್ರೂ ಊಟದ ಸಮಯ ಇಲ್ಲೇ ಹೋಗೋಣೇನು ?' ಅಂತ ಬಾರ್ಬರಾ ಕೇಳಿದಳು. ಬಾರ್ಬರಾ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರಿಸಬೇಕಾದ ಅವಶ್ಯಕತೆಯೇ ಇಲ್ಲ. ಮುಂದಿನ ಕಾರ್ಯಕ್ರಮ ನಿರ್ಧರಿಸಿ ಉಪಚಾರಕ್ಕೆ ಪ್ರಶ್ನೆ ಕೇಳುವ ಅವಳ ಪ್ರವೃತ್ತಿ, ನನಗೆ ಹೊಸದೇನಲ್ಲ. ಅವಳ ಹಿಂದೆ ನಡೆದೆ.

ಷೇಕ್ಸ್‌ಪಿಯರ್‌ನ ಜೀವಿತಕಾಲದಲ್ಲಿ , ಕ್ರಿಸ್ತಶಕ 1599ರ ಸುಮಾರಿನಲ್ಲಿ ಕಟ್ಟಿದ ಬಯಲು ರಂಗಮಂದಿರದ ವಿನ್ಯಾಸವನ್ನು ಚಾಚೂ ತಪ್ಪದೇ ಅನುಕರಿಸಿ ಕಟ್ಟಿರುವ ರಂಗಮಂದಿರ ಗ್ಲೋಬ್ ಥಿಯೇಟರ್. ಪ್ರತಿ ವರ್ಷ ಮೇ ತಿಂಗಳಿನಿಂದ ಸೆಪ್ಟೆಂಬರಿನ ವರೆಗೆ ಇಲ್ಲಿ ಷೇಕ್ಸ್‌ಪಿಯರನ ನಾಟಕಗಳ ಸುರಿಮಳೆ. ರಂಗಮಂದಿರದ ಕೆಳಗಿನ ಮಾಳಿಗೆಯಲ್ಲಿ ಷೇಕ್ಸ್‌ಪಿಯರನ ಕಾಲದ ನಾಟಕ ಪರಿಕರಗಳು, ಉಡುಗೆತೊಡುಗೆಗಳು ಇವನ್ನೆಲ್ಲಾ ಪ್ರದರ್ಶನಕ್ಕೆ ಇಟ್ಟಿದ್ದಾರೆ. ಒಟ್ಟಿನಲ್ಲಿ ಬಹುವಾಗಿ ಆಸಕ್ತಿ ಮೂಡಿಸುವಂತಹ ನೋಟ ಈ ಗ್ಲೋಬ್ ಥಿಯೇಟರ್.

ಊಟದ ನಂತರ ಪಟ್ಟಣವನ್ನೆಲ್ಲಾ ಸುತ್ತಾಡಿ, ಸಾಮರ್ಸೆಟ್ ಹೌಸ್ ಬಳಿ ಬಂದೆವು. ಈ ಪಟ್ಟಣದ ಜನನ, ಮರಣ ಹಾಗೂ ವಿವಾಹಗಳ ದಾಖಲೆಗಳನ್ನು ಈ ಕಟ್ಟಡದಲ್ಲಿ ಜೋಪಾನವಾಗಿ ಇಟ್ಟಿದ್ದಾರೆ. ಈ ಕಟ್ಟಡನ್ನು ವಿವರಿಸುತ್ತಾ ಬಾರ್ಬರಾ, " This is where they " Hatch 'em, Match 'em and dispatch 'em" " ಅಂತ ನಗಾಡಿದಳು.

ಆ ಒಂದೆರಡು ಘಂಟೆಗಳ ಸುತ್ತಾಟದಲ್ಲಿ, ಲಂಡನ್ನಿನ ಚರಿತ್ರೆಯ ಒಂದು ಅಪೂರ್ವ ಒಳನೋಟ ದೊರಕಿತು. ದಿನವೆಲ್ಲಾ ಉಲ್ಲಾಸದಿಂದ ಲಂಡನ್ ಸುತ್ತಾಡಿ ಸಂಜೆ ಯೂಸ್ಟನ್ನಿನಲ್ಲಿ ನಾನು ಬಾರ್ಬರಾಳಿಗೆ ವಿದಾಯ ಹೇಳಿ ಮಗಳ ಊರಿಗೆ ಟ್ರೇನ್ ಹಿಡಿದೆ.



ಗ್ಲೋಬ್ ಥಿಯೇಟರ್ - ಲಂಡನ್

# ರಾಶಿ ನೂರರ ಸಂಭ್ರಮ

ನವೆಂಬರ್ 10 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಕಾಡಿಗೆ ಹೋದ 'ಕೊರವಂಜಿ' ಮತ್ತೆ ಕಾಣಿಸಿಕೊಂಡಳು ನಾಲ್ಕು ತಾಸುಗಳ ಕಾಲ. ಬೇಗ ಸೀಟು ಹಿಡಿಯಲು ತವಕ ಒಂದುಕಡೆ ಆದರೆ ಜನರನ್ನು ಓಡಿದು ನಿಲ್ಲಿಸಿದ್ದು ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿಯೇ ಬರೆದ ಚಿತ್ರಗಳ ಮೂಲ ಪ್ರತಿಗಳು. ಗೆರೆಗಳು- ಒಂದು ಆಕರ್ಷಣೆಯಾದರೆ ಅಡಿಬರಹಗಳದ್ದು ಮತ್ತೊಂದು ಆಕರ್ಷಣೆ. ಜತೆಗೆ ರಾಶಿಯವರು ಬರೆದ ಪುಸ್ತಕಗಳ ಪಟ್ಟಿ 'ಕೃತಿಗಳ ರಾಶಿ'ಯ ಅವಲೋಕನ ಮತ್ತೊಂದೆಡೆ. ಸಮಾರಂಭ ಆರು ಘಂಟೆಗಾದರೂ ಐದು ಘಂಟೆಗೆ ಸ್ಥಳ ಭರ್ತಿ. ಹಾಸ್ಯಬ್ರಹ್ಮ ಟ್ರಸ್ಟ್, ಕೊರವಂಜಿ ಅಪರಂಜಿ ಟ್ರಸ್ಟ್ ನಡೆಸುತ್ತಿರುವ ಸಮಾರಂಭ ಎಂಬ ಒಂದೇ ಕಾರಣದಿಂದ ಹೀಗೆ ಎನ್ನುವುದರ ಜತೆಗೆ ರಾಶಿಯವರನ್ನು ಕುರಿತಾದ ಸಾಕ್ಷ್ಯಚಿತ್ರ ನೋಡಲು ಹೌಸ್‌ಫುಲ್ ಆಗಿತ್ತು. ವೈದ್ಯನಾಥನ್ ತೆಗೆದ ಅಚ್ಚುಕಟ್ಟು ಸಾಕ್ಷ್ಯಚಿತ್ರ ಅನೇಕರಿಗೆ ಗೊತ್ತಿಲ್ಲದ ಮಾಹಿತಿಯನ್ನು ಒದಗಿಸಿತು. ಬೆಂಗಳೂರು ಮೆಡಿಕಲ್ ಕಾಲೇಜು ಸ್ಥಾಪನೆ, ಕೆಲವು ವರ್ಷಗಳ ನಂತರ ಸರ್ಕಾರಕ್ಕೆ ಹಸ್ತಾಂತರ ಮಾಡಿದ್ದು, ವಿಕ್ಟೋರಿಯಾ ಹಾಸ್ಪಿಟಲ್ ಕಟ್ಟಡ ಕಟ್ಟಲು ಹಣ ಸಂಗ್ರಹಣೆಗಾಗಿ ಕೈಲಾಸಂರವರಿಂದ 'ಹೋಂ ರೂಲ್' ನಾಟಕ ಆಡಿಸಿದ್ದು ಅನೇಕರಿಗೆ ಹೊಸ ವಿಷಯವಾಗಿತ್ತು. ರಾಶಿಯವರನ್ನು ಕುರಿತು ಡಾ|| ಎಚ್.ಕೆ. ರಂಗನಾಥ್, ಡಾ|| ನರಹಳ್ಳಿ ಬಾಲಸುಬ್ರಮಣ್ಯ, ಶ್ರೀ ಬಿ.ವಿ. ವೈಕುಂಟರಾಜು, ಡಾ|| ಕೃಷ್ಣಮೂರ್ತಿ ಹಾಗೂ ರಾಶಿಯವರ ಪುತ್ರಿ ಕಮಲಾ ರಾಮಸ್ವಾಮಿ ಹಾಗೂ ಪುತ್ರ ಅಪರಂಜಿ ಶಿವು ಮಾತನಾಡಿದರು. 'ಒಳ್ಳೆ ಕ್ವಾಲಿಟಿ ಪ್ರೊಡಕ್ಷನ್' ಅನ್ನುವ ಮಾತು ಅನೇಕ ವೀಕ್ಷಕರ ಬಾಯಿಂದ ಹೊರಬಂದಿತು.

ಕಾಲದ ಬಗ್ಗೆ ಯಾವಾಗಲೂ ಮಾತನಾಡುತ್ತಿದ್ದ ಹಾಗೂ ಆ ವಿಷಯದ ಮೇಲೆ ಪುಸ್ತಕ ಬರೆದ ಡಾ|| ಶಿವರಾಂ ಜನ್ಮ ಶತಮಾನೋತ್ಸವ ಸಮಾರಂಭ ಸರಿಯಾದ ಸಮಯಕ್ಕೆ ಪ್ರಾರಂಭವಾಗದಿದ್ದರೆ ಹೇಗೆ? ಅದೂ 'ಹಾಸ್ಯೋತ್ಸವ' ಜನಕರಿಂದ ಕಾಯುತ್ತಿದ್ದ ಕ್ಷಣ ಬಂದೇ ಬಂತು. ಶ್ರೀ ಕೆ.ಕೆ. ಮಲ್ಲಾನಿಯವರು ದೀಪ ಬೆಳಗುವುದರ ಮೂಲಕ ಉದ್ಘಾಟನೆ ಮಾಡಿ ತಮಗೆ ಡಾ|| ಶಿವರಾಂ ಅವರ ನಿಕಟ ಸಂಪರ್ಕದ ಬಗ್ಗೆ ಸ್ವಾರಸ್ಯವಾಗಿ ಮಾತನಾಡಿದರು. ಚಿಕ್ಕ ವಯಸ್ಸಿನಲ್ಲಿ ತಾವು ನುಂಗಿದ ಗುಂಡುಪಿನ್ನು ಹಾಗೂ ಘಂಟೆಗೊಂದು ಎಕ್ಸ್‌ರೇ ತೆಗೆದು ಕಾಲಕ್ರಮೇಣ ಅದು ಮೂರನೇ ಎಕ್ಸ್‌ರೇಗೆ ಮಾಯವಾದ ಘಟನೆಯನ್ನು ತಿಳಿಸಿದರು. ರಾಶಿಯವರ ಪ್ರಕಾರ ಧೈರ್ಯವಿದ್ದರೆ ಹೆಚ್ಚಿನ ಅಪಾಯವಾಗದು ಒಂದು ವೇಳೆ ಮಲ್ಲಾನಿ ಧೈರ್ಯಗೆಟ್ಟಿದ್ದರೆ ಯೋಚನೆಯಿಂದ ಕರುಳು ಸಂಕುಚಿತಗೊಂಡು ಗುಂಡುಪಿನ್ನು ಚುಚ್ಚಿ ನೋವಾಗಬಹುದಿತ್ತು ಆದರೆ ಸ್ಥೈರ್ಯವಾಗಿ ನಾರ್ಮಲ್ ಇದ್ದುದರಿಂದ ಏನು ಆಗದೆ ಬಚಾವ್ ಆದರು. ಈ ಸಂಶೋಧನೆ ಬಗ್ಗೆ ಮುಂದೆ ಅನೇಕ ಮೆಡಿಕಲ್ ಸೆಮಿನಾರ್‌ಗಳಲ್ಲಿ ಡಾ|| ಶಿವರಾಂ ಮಾತನಾಡುತ್ತಿದ್ದರಂತೆ.



ನಿಮ್ಹಾನ್ಸ್‌ನ ಪರಿಣಿತ ವೈದ್ಯ ಡಾ|| ಆರ್.ಎಂ. ವರ್ಮ ತಮ್ಮ ಅನುಭವವನ್ನು ಬಹಳ ಉತ್ಸಾಹದಿಂದ ಹಂಚಿಕೊಂಡರು. ರಾಶಿಯವರು ಒಂದು ಅದಮ್ಯ ಚೇತನವೆಂದ ಅವರು ರಾಶಿಯವರ ಮನೋಧರ್ಮ, ಅವರ ಓದಿನ ವಿಸ್ತಾರ, ಜನರೊಂದಿಗೆ ಅವರ ಸ್ನೇಹ ಹಾಗೂ ಅವರು ಪ್ರತಿಪಾದಿಸಿದ ಮೌಲ್ಯ ಸ್ವಾಮಿ ವಿವೇಕಾನಂದ, ಸ್ವಾಮಿ ರಂಗನಾಥಾನಂದರಂತಹದ್ದು ಎಂದು ಹೇಳಿದರು. ಹಾಸ್ಯ ಕಚುಗುಳಿ ಇಡುವಷ್ಟು ಹರಿತವಾಗಿರಬೇಕು ಆದರೆ ಯಾರಿಗೂ ಗಾಯಮಾಡದಂತೆ ಮೊಂಡಾಗಿರಬೇಕೆಂಬ ದೃಷ್ಟಿ ರಾಶಿಯವರದ್ದಾಗಿತ್ತು. ರಾಶಿಯವರು ಪ್ರತಿಯೊಬ್ಬ ವೈದ್ಯನಿಗೂ 'ರೋಲ್ ಮಾಡೆಲ್' ಎಂದಾಗ ಸಭಿಕರೆಲ್ಲಾ ಚಪ್ಪಾಳೆ ಮೂಲಕ ಅನುಮೋದಿಸಿದರು.

ಮನೋವಿಜ್ಞಾನಿಯಾದ ಡಾ|| ಅಶೋಕ ಪೈ 'ಮನೋನಂದನ' 'ಮನಮಂಥನ' ಪುಸ್ತಕದ ಕುರಿತು ಮಾತನಾಡುವಾಗ ಅಂತಹ ಪುಸ್ತಕಗಳು ಲಭ್ಯವಿಲ್ಲದ್ದು ದೊಡ್ಡ ದುರಂತವೆಂದು ಬೇಜಾರು ಮಾಡಿಕೊಂಡರು. ಅನೇಕ ಖಾಯಿಲೆಗಳು ಮನಸ್ಸಿನಿಂದ ಆಗುವಂತಹದ್ದು ಎಂದು ಕಾರಣವನ್ನು ಕೆದಕಿ ರೋಗ ನಿರ್ಣಯ ಮಾಡುತ್ತಿದ್ದ ರಾಶಿಯವರ ಪ್ರಯತ್ನ, ನಲ್ವತ್ತು ವರ್ಷಗಳ ನಂತರ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಚರ್ಚೆಯಾಗುತ್ತಿದೆ ಎಂದು ಡಾ|| ಅಶೋಕ್ ಪೈ ಹೇಳಿದಾಗ ಒಂದೇ ಸಮನೆ ಕರತಾಡನವಾಯಿತು. ರೋಗ ಭ್ರಮೆಗಳ ಬಗ್ಗೆ ಸ್ವಾರಸ್ಯಕರ ಘಟನೆಗಳನ್ನು ಹಾಸ್ಯಮಯವಾಗಿ ವಿವರಿಸಿದರು.

ಶ್ರೀ ಎಂ.ಎಸ್. ನರಸಿಂಹಮೂರ್ತಿ ರಾಶಿಯವರ ಅನೇಕ ಹಾಸ್ಯಸೃಷ್ಟಿಯ ನಮೂನೆಗಳನ್ನು ಬಣ್ಣಿಸಿದರು. ಜೈಲಿನಲ್ಲಿ ಅಚ್ಚುಕಟ್ಟಾಗಿ ಕಸ ಗುಡಿಸುವ ಖೈದಿಯನ್ನು



ಜೈಲಿನ ಅಂಗಳ, ಜೈಲರ್ ಕೊಠಡಿ ಎಲ್ಲಾ ಗುಡಿಸಿ ಜೈಲ್‌ನ ಗೇಟಿನ ಒಳಗೆ ಹೊರಗೆ ಕಸ ಗುಡಿಸಲು ಹೇಳಿದಾಗ, ರಸ್ತೆನೂ ಗುಡಿಸಿ ಹಾಗೆ ಅಕ್ಕಪಕ್ಕದ ರಸ್ತೆ, ಹೀಗೆ ಊರೇ ಗುಡಿಸಿ ನಾಪತ್ತೆಯಾದ ಸ್ವಾರಸ್ಯವನ್ನು ಹೇಳುತ್ತಾ ರಾಶಿಯವರನ್ನು ನೆನಪಿಸಿಕೊಂಡರು.

ಅಧ್ಯಕ್ಷ ಭಾಷಣ ಮಾಡಿದ ಪ್ರೊ॥ ಅ.ರಾ. ಮಿತ್ರ ರಾಶಿಯವರೊಡನೆ ಸಂದರ್ಶನವೊಂದಕ್ಕೆ ಆರು ದಿನಗಳ ಕಾಲ ಕಳೆದ ಸುಸಂದರ್ಭವನ್ನು ಜ್ಞಾಪಕ ಮಾಡಿಕೊಂಡು ರಾಶಿಯವರು 'ಸಾರಸ್ವತ ಸಂಪತ್ತು' ಎಂದು ವರ್ಣಿಸಿದರು.

ರಾಶಿಯವರ ವಿರಚಿತ ಕೆಲವು ತುಣುಕುಗಳನ್ನು ಗಾನವಿನೋದಿನಿ ತಂಡ ಅಭಿನಯಿಸಿ ರಂಜಿಸಿತು. ಅತ್ತೆ-ಸೊಸೆ ಕಾಗದದ ಪ್ರಸಂಗ, ಜೇಬುಗಳ್ಳ ಜಿಮ್ಮಿ ಹಾಗೂ ಡಾಕ್ಟರ್-ಪೇಶಂಟ್ ಜೋಕ್ಸ್‌ಗಳ ಆಯ್ಕೆಯಾಗಿತ್ತು. ಮೊದಲೇ ನಿರ್ಧರಿಸಿದಂತೆ 9 ಘಂಟೆಗೆ. ಸಮಾರಂಭ ಮುಗಿಯಬೇಕೆಂಬ ಹಠವಿದ್ದರಿಂದ ವಿದಾಯ ಹೇಳಲೇಬೇಕಾಯಿತು.

ಸಮಾರಂಭಕ್ಕೆ ಸ್ವಾಗತ ಮತ್ತು ಪರಿಚಯವನ್ನು ಅಪರಂಜಿ ಶಿವು ಮಾಡಿದರು, ಪ್ರಸ್ತಾವನೆ ಕೃಷ್ಣ ಸುಬ್ಬರಾವ್ ಅವರಿಂದ ಅಚ್ಚುಕಟ್ಟಾದ ನಿರೂಪಣೆ ಬೇಲೂರು ರಾಮಮೂರ್ತಿ ಮಾಡಿದರು.

– ಇಸ್ಟೈಯಿಲ್

# ವಿಜ್ಞಾನ ವಿಹಾರ

– ಬಿ.ಜಿ.ಎಲ್. ಸ್ವಾಮಿ

[ಸಸ್ಯ ವಿಜ್ಞಾನಿ ಬಿ.ಜಿ.ಎಲ್.ಸ್ವಾಮಿ, ( ತಮಿಳಿನಲ್ಲಿ ಪ.ಚ.ಲ.ಚಾಮಿ ) ಬೆಂಗಳೂರು ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಯಾಗಿದ್ದಾಗ ಪ್ರಾಣಿ ವಿಜ್ಞಾನದ ವಿಸ್ಮಯಗಳ ಬಗೆಗೆ ಬರೆದಿದ್ದ ಒಂದು ಸಣ್ಣ ಕತೆ ಮತ್ತು ಒಂದು ಕವನ. ಸ್ವಾಮಿಯವರ 'ಪಂಚಕಲಶ ಗೋಪುರ 'ಕ್ಕೆ ಜಿ.ಪಿ.ರಾಜರತ್ನಂ ಬರೆದಿರುವ ಮುನ್ನುಡಿಯಿಂದ. ಆಯ್ಕೆ: ಚಂಬಾ]

## ಪ್ರಣಯ ಪ್ರಸಂಗ

ಆಗ ಸನ್ನಿವೇಶ ಬಹು ಅನುಕೂಲವಾಗಿತ್ತು. ವಸಂತಋತು, ಹೂದೋಟ, ಇಳಿಸಂಜೆ, ಕುಸುಮಿತ ಸಮಯ. ಮರದ ಕೊಂಬೆಯ ಮೇಲೆ ಎರಡು ಹಕ್ಕಿಗಳು ಪ್ರೇಮ ವಿನಿಮಯದಲ್ಲಿ ತೊಡಗಿದ್ದವು. ಗಂಡುಹಕ್ಕಿ ತನ್ನ ಗರಿಗಳನ್ನು ಬಿಚ್ಚಿ ಹರಡಿ, ಸೊಬಗು ಬಿನ್ನಾಣಗಳನ್ನು ಮೆರೆಸಿ, ಪ್ರೇಯಸಿಯ ಒಲವನ್ನು ನಿರೀಕ್ಷಿಸುತ್ತಿತ್ತು. ಕೊಂಬೆಯಲ್ಲಿದ್ದ ಹೂಗಳು ಅರಳಿ ಸೌರಭವನ್ನು ತಿಳಿಗಾಳಿಯೊಡನೆ ಬೆರೆಸಿ, ಮಧುಕೋಶವನ್ನು ತೆರೆದಿಟ್ಟು, ತಮ್ಮ ವಂಶಾಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಕ್ಕಾಗಿ, ಹುಳುಗಳಿಗೆ ಆಮಂತ್ರಣ ಕೊಟ್ಟಿದ್ದವು. ಈ ಕಾರ್ಯವನ್ನು ಆಗಮಾಡಿಸಲು ಬಂದ ಕೆಲವು ಪತಂಗಗಳು ತಮ್ಮ ಪ್ರಿಯರನ್ನು ಸೇರಿಕೊಂಡು ಪ್ರಣಯ ಲೀಲೆಯಲ್ಲಿ ನಿರತವಾಗಿದ್ದವು. ಸನ್ನಿವೇಶ ಪ್ರೇಮಮಯವಾಗಿತ್ತು.

ಆ ಮರದ ಕಾಂಡ ಕವಲೊಡೆದಿರುವ ಎಡೆಯಲ್ಲಿ ಹೆಣ್ಣು ಜೇಡ ಬಲೆ ನೇಯ್ದಿದೆ. ಅದು ಉಭಯ ಪಂಡಿತೆ. ಬಲೆ ಬೀಸುವುದರಲ್ಲಿ ಬೇಡರಿಗಿಂತಲೂ ಹೆಚ್ಚು ನೈಪುಣ್ಯ ಅದಕ್ಕಿತ್ತು. ನಿವಾಸವನ್ನು ಕಟ್ಟಿಕೊಳ್ಳುವುದರಲ್ಲಿ ಮಾನವ ವಾಸ್ತು ಶಿಲ್ಪಿಗಳಿಗಿಂತಲೂ ಹೆಚ್ಚು ಕೌಶಲವಿತ್ತು. ಅದು ನಿರ್ಮಿಸಿಕೊಂಡಿರುವಕಟ್ಟಡ ತನಗೆ ಮಾತ್ರ ವಾಸಸ್ಥಾನ, ಮಿಕ್ಕವರಿಗೆ ಮೃತ್ಯು ಪಂಜರ. ಸುಮಾರು ಎರಡು ಅಡಿಗಳಷ್ಟು ಅಗಲವಿರುವ ಆ ಬಲೆಮನೆಯ ಮಧ್ಯದಲ್ಲಿ ಅದು ಆಹಾರಕ್ಕಾಗಿ ಹೊಂಚುಹಾಕುತ್ತಾ ಕುಳಿತಿದೆ.

ಗಂಡುಜೇಡ ಪ್ರೇಮಮಯವಾದ ಸನ್ನಿವೇಶದಲ್ಲಿ ಬಲೆಯ ಎಡೆಗೆ ಹರಿದು ಬಂದಿತು. ಬಲೆಯ ಒಂದು ತಂತುವನ್ನು ಅಲುಗಿಸಿ, ತಾನು ಬಂದಿರುವ ಸಂದೇಶವನ್ನು ಬಲೆಯ ಮಧ್ಯದಲ್ಲಿ ಕುಳಿತಿದ್ದ ರಾಣಿಗೆ ತಿಳಿಸಿತು. ಗಂಡುಜೇಡ ತಂತುವನ್ನು ಇನ್ನಾರಿಂದಲೂ ಸಾಧ್ಯವಿಲ್ಲದ ,ಒಂದು ಪ್ರತ್ಯೇಕವಾದ ರೀತಿಯಲ್ಲಿ ಮಾತ್ರ ಅಲುಗಿಸಿತು. ಇದರಿಂದ ಅದರ ಪ್ರೇಯಸಿಗೆ ತನ್ನ ಪ್ರಾಣನಾಥನ ಆಗಮನ ತಿಳಿಯಿತು. ಹೆಣ್ಣು ಜೇಡ ಒಂದೆರಡು ಹೆಜ್ಜೆ ಗಂಡಿನ ಕಡೆಗೆ ಸರಿಯಿತು. ಗಂಡುಜೇಡ ಮುಂದೆಬಂದು ಆ ಹೆಣ್ಣನ್ನು ಸೇರಿತು. ಸಮಾಗಮವಾಯಿತು. ವಿಶ್ವಸಂಕಲ್ಪ ನೆರವೇರಿತು. ಕೆಲವು ನಿಮಿಷಗಳ ತರುವಾಯ ಒಂದನ್ನೊಂದು ಅಗಲಿದವು. ಗಂಡುಜೇಡ ಕೃತಾರ್ಥತೆಯಿಂದ ಬಲೆಬಿಟ್ಟು ಹೊರಡುವುದಕ್ಕೆ ಒಂದೆರಡು ಹೆಜ್ಜೆ ಮುಂದಿಟ್ಟಿತು. ಹೆಣ್ಣು ಅದರಮೇಲೆ ಹಾರಿತು. ಕಚ್ಚಿತು. ಕೊಂದಿತು, ತಿಂದಿತು! ಪ್ರಣಯ ಪ್ರಸಂಗವಿಲ್ಲಿಗೆ ಮುಗಿಯಿತು......

# ಒಗಟು ಪದ್ಯ

ಕೈ, ಕಾಲು, ಮೈ, ನವಿರು, ಮೂತಿ ಬಾಲಗಳುಂಟು,
ಬರಿ ಗೊಂಬೆಯಲ್ಲ;
ಹಾಲ್ಗರೆವ ಮೊಲೆಯುಂಟು, ಮರಿಗದರ ಹಾಲುಂಟು,
ಆಕಳೇನಲ್ಲ;
ಕೊಕ್ಕೊಳಗೆ ಬಾಯುಂಟು, ಬಾಯೊಳಗೆ ಹಲ್ಲಿಲ್ಲ,
ಖಗವು ತಾನಲ್ಲ;
ನೀರಿನಲ್ಲೀಜುವುದು , ನೆಲದ ಮೇಲೋಡುವುದು,
ಇದು ಕಪ್ಪೆಯಲ್ಲ;
ಹಂಸೆಗಿರುವಂತಿದಕೆ ಜಾಲ ಪಾದಗಳುಂಟು,
ಬಾತೇನು ಅಲ್ಲ;
ನಿಶೆಯೊಳಗೆ ಹೊರಬಂದು ಆಹಾರ ತಡಕುವುದು
ದೆವ್ವವೂ ಅಲ್ಲ;
ತಾನಿಡುವ ಮೊಟ್ಟೆಗಳ ಕಾವಿತ್ತು ಒಡೆಸುವುದು,
ಕೋಳಿಯೂ ಅಲ್ಲ;
ಒಗಟು ಬಯಲಾಗಿಪನು ಕನ್ನಡಿಗ ಜಾಣ,
ಕೈಲಾಗದಿದ್ದವನು ಕನ್ನಡದ ಕೋಣ.

[ಉತ್ತರ : ಪ್ಲಾಟಿಪಸ್. ಇದು ಆಸ್ಟ್ರೇಲಿಯಾ ಖಂಡದ ಬಹು ವಿಚಿತ್ರ ಪ್ರಾಣಿ. ಅದು ಹಕ್ಕಿಯೆ, ಉರಗವೆ, ಸಸ್ತನಿಯ್, ಎಂದು ಕೇಳಿದರೆ ಎಲ್ಲದಕ್ಕೂ ಹೆಚ್ಚು ಕಡಿಮೆ 'ಊಂ' ಎಂದು ಹೇಳಬೇಕಾಗಬಹುದು. ಈ ಪ್ರಾಣಿ ಸೃಷ್ಟಿ ಚರಿತ್ರೆಯ ಒಂದಾನೊಂದು ಮುಖ್ಯ ಘಟ್ಟಕ್ಕೆ ಸಾಕ್ಷೀಭೂತವಾಗಿದೆ ]

---

# ಓದುಗರ ಓಲೆ

ನನ್ನ ಚಂದಾ ಅವಧಿ ಜನವರಿ 2004ಕ್ಕೆ ಮುಗಿದಿದ್ದರೂ ಅಪರಂಜಿ ಕಳಿಸುತ್ತಿರುವುದು ಬಹಳ ಸಂತೋಷದ ವಿಷಯ. ಒಮ್ಮೆ ನಮ್ಮ ಅಪರಂಜಿ ಬಳಗಕ್ಕೆ ಬಂದವರನ್ನು ಅವರಲ್ಲೇ ಉಳಿಸಿಕೊಳ್ಳುವ ಕಾಳಜಿ ನಿಜಕ್ಕೂ ಅತ್ಯಂತ ಸಂತಸ ಉಂಟು ಮಾಡಿದೆ. ನನ್ನ ಹತ್ತು ವರ್ಷದ ಚಂದಾ ಕಳಿಸುತ್ತಿದ್ದೇನೆ.

– **ಹೆಚ್.ವಿ. ಮುರಳೀಧರ್**, ಜಯನಗರ, ಬೆಂಗಳೂರು

ನನ್ನ ವಾರ್ಷಿಕ ಚಂದಾವನ್ನು ಹತ್ತು ವರ್ಷದ ಚಂದಾ ಆಗಿ ನವೀಕರಿಸುತ್ತಿದ್ದೇನೆ. ಅಪರಂಜಿಗೆ ಎಲ್ಲರೂ ದೀರ್ಘ ಅವಧಿಗೆ ಚಂದಾದಾರರಾಗಿರುವುದು. ನಮಗೂ, ಅಪರಂಜಿಗೂ ಸಂತಸದ ವಿಷಯ.

– **ಡಿ.ಆರ್. ನಾಗಚಂದ್ರ**, ವಿಜಯನಗರ

# ಡಾ|| ಬಿ.ಜಿ.ಎಲ್. ಸ್ವಾಮಿ

## ವಿಶಿಷ್ಟ ವಿಡಂಬನೆಯ ರೂವಾರಿ

**- ಕೆ.ಎನ್. ಮಹಾಬಲ**

ಅಂತರರಾಷ್ಟ್ರೀಯ ಖ್ಯಾತಿಯ ಸಸ್ಯವಿಜ್ಞಾನಿ, ಸಾರವತ್ತಾದ ಮತ್ತು ವಿಸ್ತೃತವಾದ ಸ್ವ-ಅನುಭವಕ್ಕೆ ವಿಡಂಬನೆಯ ಲೇಖನಿಯಲ್ಲಿ ಹೊಳಪು ನೀಡಿದ ಲೇಖಕ, ಸಂಗೀತಜ್ಞ, ವ್ಯಂಗ್ಯಚಿತ್ರ ಕಲಾವಿದ, ಶಾಸನ ಶಾಸ್ತ್ರಜ್ಞ, ಆದರ್ಶ ಅಧ್ಯಾಪಕ - ಇಷ್ಟೆಲ್ಲಾ ಗುಣ, ಅಂಶ ಮತ್ತು ಪ್ರತಿಭೆಗಳು ಒಬ್ಬರಲ್ಲೇ ಮನೆ ಮಾಡಿರಲು ಸಾಧ್ಯವೇ ಎಂದು ಯಾರಾದರೂ ಸಂದೇಹವಾದಿಗಳು ಪ್ರಶ್ನಿಸಿದರೆ 'ಹೌದು' ಎನ್ನಬೇಕಾಗುತ್ತದೆ. ಉತ್ತರ ರೂಪವಾಗಿ ಡಾ|| ಬಿ.ಜಿ.ಎಲ್. ಸ್ವಾಮಿಯವರ ಸಾಧನೆಯತ್ತ ಅಂಥವರ ಗಮನ ಹರಿಸಬೇಕಾಗುತ್ತದೆ.

ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣ ಸ್ವಾಮಿ (ಬಿ.ಜಿ.ಎಲ್. ಸ್ವಾಮಿ) ಅಂಥ ಮೇರುಸದೃಶ ವ್ಯಕ್ತಿತ್ವ. ಜನಸಾಮಾನ್ಯರಿಗೆ ಸಸ್ಯಶಾಸ್ತ್ರದಂಥ ವಿಜ್ಞಾನ ವಿಷಯವನ್ನು ಸುಲಲಿತವಾಗಿ ಪರಿಚಯ ಮಾಡಿಕೊಡುವ ಹಸುರು ಹೊನ್ನು, ಸಾಕ್ಷಾತ್ಕಾರದ ಹಾದಿಯಲ್ಲಿ, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕಾ. ವಿದ್ಯಾಕ್ಷೇತ್ರದ ಜ್ವಲಂತ ದುರಂತವನ್ನು ವಿಡಂಬನಾತ್ಮಕ ಶೈಲಿಯಲ್ಲಿ ಚಿತ್ರಿಸಿರುವ ಕಾಲೇಜು ರಂಗ, ಕಾಲೇಜು ತರಂಗ, ಪ್ರಾಧ್ಯಾಪಕನ ಪೀಠದಲ್ಲಿ, ತಮಿಳು ತಲೆಗಳ ನಡುವೆ - ಮುಂತಾದ ಕೃತಿಗಳು ಸ್ವಾಮಿಯವರ ಸೃಷ್ಟಿ.

ಚೆನ್ನೈನ ಇತಿಹಾಸ ಪ್ರಸಿದ್ಧ ಪ್ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಾಲರಾಗಿ ನಿವೃತ್ತರಾದ ಮೇಲೂ ತಮ್ಮ ಮೆಚ್ಚಿನ ವಿಷಯವಾದ ಸಸ್ಯಶಾಸ್ತ್ರದ ಅಧ್ಯಯನದಲ್ಲಿ ಕೊನೆಯುಸಿರಿರುವವರೆಗೂ ನಿರತರಾದ ಡಾ|| ಬಿ.ಜಿ.ಎಲ್. ಸ್ವಾಮಿ ಕನ್ನಡಿಗರು ಮರೆಯಲಾಗದ ಮತ್ತು ಮರೆಯಲೇ ಬಾರದ ಒಂದು ಚಿರಸ್ಥಾಯಿ ಚೇತನ.

**ಹಿನ್ನೆಲೆ:**

ಪರಿಸ್ಥಿತಿ - ಸಂಗತಿಯೊಂದರ ಅಥವಾ ವ್ಯಕ್ತಿಯೊಬ್ಬನ ವಿಲಕ್ಷಣ ನಿರೂಪಣೆಯಿಂದ ಓದುವವರ ಮನಸ್ಸಿನಲ್ಲಿ ನಗೆ ಬುಗ್ಗೆ ಚಿಮ್ಮಿಸುವುದು ಹಾಸ್ಯಕ್ಕೆ ಸಾಮಾನ್ಯವಾಗಿ ನೀಡಬಹುದಾದ ವಿವರಣೆ. ಹಾಸ್ಯದ ಒಂದು ನಾಗರಿಕ ರೂಪವಾದ ವಿಡಂಬನೆಯು ಇನ್ನೂ ಮಿಗಿಲಾದ ಕರ್ತವ್ಯವನ್ನು ನಿರ್ವಹಿಸುತ್ತದೆ. ಹಾಸ್ಯವನ್ನು ಹೊಮ್ಮಿಸುತ್ತಲೇ ಓದುಗರಲ್ಲಿ ಸತ್ಯದ ಅಂತರಂಗವನ್ನು ತೋರುವ ಕೆಲಸವನ್ನು ಮಾಡುತ್ತದೆ. ಇಂಗ್ಲಿಷ್ ಸಾಹಿತ್ಯದಲ್ಲಿ ಎ.ಜಿ. ಗಾರ್ಡ್ನರ್, ಜಿ.ಕೆ. ಚೆಸ್ಟರ್‌ಟನ್, ಡಬ್ಲ್ಯೂ. ಎಂ. ಥ್ಯಾಕರೆ, ಮೊದಲಾದವರು Satire' ಎಂದು ಖ್ಯಾತವಾಗಿರುವ ವಿಡಂಬನೆಯ ಪ್ರಾಕಾರವನ್ನು ಸಮಾಜದ ಕೆಲವು ವರ್ಗದ ಜನರ ಕ್ಷುಲ್ಲಕ ಡಂಭಾಚಾರ, ಸಣ್ಣ ತನಗಳನ್ನು ಬಯಲಿಗೆಳೆಯಲು ಸಮರ್ಥವಾಗಿ ಬಳಸಿಕೊಂಡರು. ಕನ್ನಡದಲ್ಲಿ ವಿಡಂಬನೆಯ

ಹ್ಯಾಸ್ಯೆಯನ್ನು ಹಾಸ್ಯಸಾಹಿತ್ಯದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿರುವವರಲ್ಲಿ ಡಾ।। ಬಿ.ಜಿ.ಎಲ್. ಸ್ವಾಮಿ ಪ್ರಮುಖರು. ಅನುಭವ ಕಥನ ಎಂದು ವಿಮರ್ಶಕರು ಸಾಮಾನ್ಯವಾಗಿ ವರ್ಗೀಕರಣ ಮಾಡಿರುವ ಸ್ವಾಮಿಯವರ ಕೃತಿಗಳ ವಾಚನ ನಿಜಕ್ಕೂ ಒಂದು ಆಹ್ಲಾದಕರ ಅನುಭವ.

**ವಿಡಂಬನೆಯ ದಾರಿ ಏಕೆ?**

ಸ್ವಾಮಿಯವರ ಅನುಭವ ಕಥನಕ್ಕೆ ಹಾಸ್ಯ ವಿಡಂಬನೆಯ ಲೇಪನವಾಗಲು ಕಾರಣವೇನು? ಸ್ವಾನುಭವದ ನಿರೂಪಣೆಯನ್ನು ಗಂಭೀರವಾಗಿ ನೀಡಲು ಸಾಧ್ಯವಿರಲಿಲ್ಲವೆ?' ಇಂಥ ಪ್ರಶ್ನೆಗಳು ಸಹಜವಾಗಿಯೇ ಹುಟ್ಟಿಕೊಳ್ಳಬಹುದು. ಇದಕ್ಕೆ ಕಾರಣವನ್ನು ಗುರುತಿಸಿಕೊಳ್ಳುವುದೂ ಅಂಥದೇನೂ ಪ್ರಯಾಸಕರವಾದುದಲ್ಲ. ತಮ್ಮ ತಂದೆ ಪೂಜ್ಯ ಡಿ.ವಿ.ಜಿ. ಯವರಲ್ಲಿದ್ದ ಹಾಸ್ಯಪ್ರಜ್ಞೆ, ಬರವಣಿಗೆಯ ವಿನೋದ ಶೈಲಿ ಸ್ವಾಮಿಯವರಿಗೂ ಸಹಜವಾಗಿ ಹರಿದು ಬಂದಿದೆ ಎಂಬುದಕ್ಕೆ ಪ್ರತ್ಯೇಕವಾದ ಪುರಾವೆಯೇನೂ ಬೇಕಿಲ್ಲ. ಹಲವಾರು ತರನಾದ ವೈಪರೀತ್ಯ, ವೈಲಕ್ಷಣ್ಯಗಳಿಗೆ ತವರಾದ ಕಾಲೇಜು, ಶಿಕ್ಷಣರಂಗ ಸ್ವಾಮಿಯವರ ಬರವಣಿಗೆಗಳ ಆತ್ಮವಾದ ವಿಡಂಬನೆಯನ್ನು ತಂತಾನೇ ತಂದುಕೊಟ್ಟಿದೆ ಎನ್ನುವ ಅನಿಸಿಕೆಯೂ ಅಷ್ಟೇ ನಿಜ. ಇನ್ನು 'ಹಸುರು ಹೊನ್ನು' ನಂತಹ ಶೈಕ್ಷಣಿಕ ಪ್ರವಾಸ ಕೃತಿಯ ವಿಷಯ. ಈ ಕೃತಿ ಸ್ವಾಮಿ ತಮ್ಮ ಶೈಕ್ಷಣಿಕ ಪ್ರವಾಸದ ಅನುಭವದಲ್ಲಿ ಕಂಡುಕೊಂಡ ಉಪಯುಕ್ತ ವೈಜ್ಞಾನಿಕ ಅಂಶಗಳನ್ನು ಜನಸಾಮಾನ್ಯನಿಗೆ ಅರ್ಥವಾಗುವ ಶೈಲಿಯಲ್ಲಿ ಬರೆಯಲು ಹೊರಟ ಯತ್ನ ಓದುಗನಿಗೆ ಗಂಭೀರ ನಿರೂಪಣೆಯು ಭಾರವೆನ್ನಿಸದಿರಲಿ ಎಂದು ತಮ್ಮ ಸಹಜ ಸಾಮರ್ಥ್ಯವಾದ ವಿಡಂಬನೆಯನ್ನು ಬಳಸಿಕೊಂಡಿದ್ದಾರೆ.

ಹೇಗೇ ಇರಲಿ ಬಿ.ಜಿ.ಎಲ್. ಸ್ವಾಮಿಯವರು ಕೃತಿಯಲ್ಲಿ ಹಾಸ್ಯ ವಿಡಂಬನೆ ಸೃಷ್ಟಿಯಾದದ್ದು ಇಂಥ ಕಾರಣಕ್ಕೆ ಎಂದು ತೀರ್ಮಾನಕ್ಕೆ ಬರುವುದಕ್ಕಿಂತ ಅವರ ಕೃತಿಗಳಲ್ಲಿನ ಹಾಸ್ಯ ವಿಡಂಬನೆಯ ಚರ್ಚೆ ಮುಖ್ಯವಾದದ್ದು ಎನಿಸುತ್ತದೆ.

**ವಿಡಂಬನೆಯ ಸೃಷ್ಟಿ: ಹಲವು ಆಯಾಮಗಳು**

ಮುಖ್ಯವಾಗಿ ಬಿ.ಜಿ.ಎಲ್. ಸ್ವಾಮಿಯವರ ಕೃತಿಗಳಲ್ಲಿ ನಿರೂಪಣೆಗೊಂಡಿರುವ ವಿಡಂಬನೆಯನ್ನು ಈ ಹಲವು ಆಯಾಮಗಳಲ್ಲಿ ಕಾಣಬಹುದು.

★ ಸಾಮಾನ್ಯ ಸಮಾಜಸ್ಥಿತಿ, ಸಾರ್ವಜನಿಕರ, ಹತ್ತಿರದ ಜನರ ನಡವಳಿಕೆಗಳು, ರಾಜಕೀಯ ಬುದ್ಧಿ ಇವುಗಳನ್ನು ಬಿಂಬಿಸುವ ನಿರೂಪಣೆ.

★ ತಮ್ಮ ಸಂಶೋಧನ, ಅಧ್ಯಾಪನ ಅಥವಾ ಶೈಕ್ಷಣಿಕ ಪ್ರವಾಸ ಸಮಯದಲ್ಲಿ ವಿದ್ಯಾರ್ಥಿಗಳ ನಡವಳಿಕೆಗಳಿಂದ ರೂಪುಗೊಂಡಿರುವ ಹಾಸ್ಯ, ವಿಡಂಬನೆ.

★ ನೌಕರಶಾಹಿಯ ಮೇಲಧಿಕಾರಿಗಳು, ಕೆಳವರ್ಗದ ಸಿಬ್ಬಂದಿ ಮುಂತಾದವರ ನಿಯಮದ ಹಾವಳಿಯಿಂದ ಪ್ರಾಮಾಣಿಕನೊಬ್ಬ ಅನುಭವಿಸಬೇಕಾದ ಕೋಟಲೆಗಳನ್ನು ವಿವರಿಸುವ ಹಾಸ್ಯ.

★ ಸಂಸ್ಕೃತಿ, ಸಾಹಿತ್ಯ, ಜೀವನ ಯಾವುದೇ ಆಗಲಿ ತಾವು ನಂಬಿದ್ದೇ ಸತ್ಯ ಎಂದು ನೆಚ್ಚಿ ಇತರರನ್ನು ಹೀಯಾಳಿಸುವ ಜನವರ್ಗದವರತ್ತ ವಿಷಾದ ನೋಟ ಬೀರುವ ವಿಡಂಬನೆ.

**ಶೈಕ್ಷಣಿಕ ಕ್ಷೇತ್ರ; ದುರಂತದ ವಿಡಂಬನೆ**

ಸ್ವಾಮಿಯವರು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ, ನಿರಂತರವಾದ ಸಂಶೋಧಕರಾಗಿ ಕೆಲಸ ನಿರ್ವಹಿಸಿದ್ದು ಎಲ್ಲರಿಗೂ ತಿಳಿದಿದ್ದೆ. ಈ ಸುದೀರ್ಘ ಅವಧಿಯಲ್ಲಿ ಹಲವಾರು ವಿಪುಲ ಅನುಭವಗಳ ಗಣಿಯನ್ನೇ ಅವರು ಅಗೆದು ತೆಗೆದಿದ್ದಾರೆ. ಒಬ್ಬ ಪ್ರಾಧ್ಯಾಪಕ ಅನಿವಾರ್ಯವಾಗಿ ನಿಭಾಯಿಸಬೇಕಾದ ವಿದ್ಯಾರ್ಥಿಗಳು, ವಿದ್ಯಾಭ್ಯಾಸ ಇಲಾಖೆಯ ಉನ್ನತ ಅಧಿಕಾರಿಗಳು, ನೌಕರಶಾಹಿಯ ಶಾಶ್ವತ ಅಂಗಗಳಾದ ಕಛೇರಿ ಮ್ಯಾನೇಜರ್, ಹೆಡ್ ಗುಮಾಸ್ತ, ಸದಾ ಸಮಸ್ಯೆಯ ಸೃಷ್ಟಿಕರ್ತರಾದ ಸಹ ಉಪಾಧ್ಯಾಯರು, ಸದಾ ಪ್ರಭಾವ ಬೀರುವುದೇ ತಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸಿರುವ ರಾಜಕಾರಣಿಗಳು ಹಾಗೂ ವಿಭಿನ್ನ ಶೈಲಿಯ ಜನರನ್ನು ಸ್ವಾಮಿ ವಿಡಂಬನೆಯ ಲೇಖನಿಯಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ವಿಡಂಬನೆಯ ಆತ್ಮ ಹಾಸ್ಯದ ದೇಹದಲ್ಲಿ ವಿಲೀನವಾಗಿ ಓದುಗರಲ್ಲಿ ತಕ್ಷಣ ನಗೆ ಹೊಮ್ಮಿಸುತ್ತದೆ ಮತ್ತು ನಿಧಾನವಾಗಿ ವಾಸ್ತವಿಕ ದುರಂತದತ್ತ ಅವರ ಗಮನ ಸೆಳೆಯುತ್ತದೆ.

ನಮ್ಮ ದೇಶದಲ್ಲಿ ನೌಕರಶಾಹಿಯು ಒಬ್ಬ ಪ್ರಾಮಾಣಿಕನನ್ನು ಶೋಷಿಸಿರುವಷ್ಟು ಮತ್ತಾರನ್ನೂ ಶೋಷಿಸಿರಲಾರದು ಸಸ್ಯಶಾಸ್ತ್ರಜ್ಞ ಸ್ವಾಮಿ ತಮ್ಮ ಪ್ರೀತಿಯ ಅಧ್ಯಯನ ಮತ್ತು ಅಷ್ಟೇ ಪ್ರೀತಿಯ ಮತ್ತೊಂದು ವಿಷಯ ಬೋಧನೆ ಇವೆಲ್ಲಾ ಬಿಟ್ಟು ಪ್ರಿನ್ಸಿಪಾಲರ ಕುರ್ಚಿಯಲ್ಲಿ ಫೈಲು ವಿಲೇ ಮಾಡುವ, ಮೇಲಧಿಕಾರಿಯ ಆಕ್ಷೇಪಣೆಗೆ ಬದಲು ನೀಡುವ (ತಮಿಳು ಪದ ಬದಿಲ್ Reply ಎನ್ನುವುದಕ್ಕೆ ಬದಲು - ಇದು ಅಪ್ಪಟ ಸ್ವಾಮಿ, ಸೃಷ್ಟಿ) ವಿದ್ಯಾರ್ಥಿಗಳ ಸಂತೈಸುವ, ಕರಟಕ ದಮನಕರೆಂದೇ ಖ್ಯಾತರಾಗಿರುವ ಆಫೀಸ್ ಮ್ಯಾನೇಜರ್ ಮತ್ತು ಹೆಡ್ ಗುಮಾಸ್ತೆಗಳ ಹಾವಳಿ ಸಹಿಸುವ ಯಂತ್ರವಾಗಿ ಬಿಡುತ್ತಾರೆ. ಅಧ್ಯಾಪಕರಿಗೆ ಅತ್ಯಗತ್ಯವಾಗಿ ಬೇಕಾದ ಸೀಮೆಸುಣ್ಣ ತರಲೂ ಸರ್ಕಾರದ ಮಂಜೂರಾತಿ, ಟೆಂಡರು ಮುಂತಾದ ಪರಿಕ್ರಮಗಳ ಸ್ವಾರಸ್ಯಕರ ನಿರೂಪಣೆಯನ್ನು ಕಾಲೇಜು ರಂಗ, ಕೃತಿ ನೀಡುತ್ತಿದೆ.

ವಿದ್ಯುತ್ ಪಂಕ ಬೇಕೆಂದು ಬೇಡಿಕೆ ಸಲ್ಲಿಸಿದಾಗ ಯಥಾ ಪ್ರಕಾರ ವಿಳಂಬ ಗತಿಯಲ್ಲಿ ವರ್ಷಗಳೇ ಉರುಳಿದರೂ ಬಾರದೇ ಹೋದ ಫ್ಯಾನು, ಆಡಿಟರರ ದಾಂಧಲೆಯಿಂದ ತತ್ತರಿಸಿದ ಪ್ರಿನ್ಸಿಪಾಲನ ಪಾಡು, ಸದಾ ಮೇಲಧಿಕಾರಿಗಳನ್ನು ಓಲೈಸುವ ಕರಟಕ ದಮನಕರು ಇದರ ಸೋದಾಹರಣ ನಿರೂಪಣೆ ಕಾಲೇಜು ರಂಗ ಮತ್ತು ಕಾಲೇಜು ತರಂಗ ಕೃತಿಗಳಲ್ಲಿ ಮೂಡುತ್ತಾ ಕ್ಷಣಕ್ಷಣಕ್ಕೂ ನೌಕರ ಶಾಹಿ ವ್ಯವಸ್ಥೆಯ ಕ್ರೂರ ಕರಾಳ ರೂಪವನ್ನು ಕಣ್ಣೆದುರು ತಂದು ನಿಲ್ಲಿಸುತ್ತದೆ.

ಪಠ್ಯ ಪುಸ್ತಕ ಸಮಿತಿಯಲ್ಲಿ ಮರ ಮುಟ್ಟುಗಳ ಚೌಜೀನೆ ವ್ಯಾಪಾರಿ, ನಿವೃತ್ತಿ ಪೋಲಿಸ್ ಅಧಿಕಾರಿ ಸದಸ್ಯರಾಗುವುದು. ವಿಜಯೋತ್ಸವ ಆಚರಿಸುವ ಉದ್ಯಾನವಲ್ಲಿ ಕರಗ ನೃತ್ಯದ

ತಂತವವವರೊಡನೆ ಕುಣಿದು ಕಾಲು ಮುರಿದುಕೊಳ್ಳುವ ಉಪಾಧ್ಯಾಯರು (ಕಾಲೇಜು ರಂಗ) ಜನಸಾಮಾನ್ಯರೊಡನೆ ಸ್ಪಂದಿಸಬೇಕೆಂದು ಬೀದಿಗಳಲ್ಲಿ ಹಾಡುತ್ತ ಬೆಳಗಿನ ಜಾವ ಧನುರ್ಮಾಸದ ಕೈಂಕರ್ಯ ನಡೆಸುವ ಉಪಾಧ್ಯಾಯರು (ಕಾಲೇಜು ತರಂಗ) ಇಂಥ ವಿವರಣೆಗಳು ಉತ್ಪ್ರೇಕ್ಷೆ ಎನ್ನುವ ಮಟ್ಟಕ್ಕೂ ಬಂದಿದೆಯೇನೋ ಅನಿಸುತ್ತದೆ. ಆದರೆ ಉತ್ಪ್ರೇಕ್ಷೆ ಎನ್ನುವುದು ಹಾಸ್ಯ ಸಾಹಿತ್ಯಕ್ಕೆ ಅನಿವಾರ್ಯವಾದ ಅಂಶ ಎಂಬುದಂತೂ ನಿಜ.

**ಪ್ರಾಧ್ಯಾಪಕನ ಪೀಠ: ಮೇಲೆ ತೂಗುವ ಶಕ್ತಿ**

ಪ್ರಾಧ್ಯಾಪಕನ ಪೀಠ ಕೃತಿಯಲ್ಲಿ ಬಿ.ಜಿ.ಎಲ್. ಪ್ರಾಧ್ಯಾಪಕರಾಗಿ ತಾವು ಅನುಭವಿಸಿದ ಪಾಡನ್ನು ಕೃತಿಯುದ್ದಕ್ಕೂ ವಿನೋದದ ಛಾಯೆಯನ್ನು ಬಳಸುತ್ತಲೇ ವಿವರಿಸಿದ್ದಾರೆ. ಒಂದು ಜತೆ ಉಪಕರಣದಿಂದಲೇ ಮೂರ್‍ನಾಲ್ಕು ಕಾಲೇಜು ನಡೆಸುವ ವಿದ್ಯಾಸಂಸ್ಥೆಯ ಚಮತ್ಕಾರ, ವಿದ್ಯಾಕ್ಷೇತ್ರದ ವ್ಯಾಪಾರೀಕರಣದತ್ತ ಗಮನ ಸೆಳೆಯುತ್ತದೆ.

ಕುರುಡು ಅನುಕರಣೆಯ ಪಾಡು ಚಿತ್ರಿತವಾಗಿರುವ ರೀತಿಯೂ ಅಷ್ಟೇ ಸ್ವಾರಸ್ಯಕರ. ಸಸ್ಯಶಾಸ್ತ್ರಜ್ಞ ಸ್ವಾಮಿ - ವಿವಿಧ ಸಸ್ಯಗಳ, ಭಾಗಗಳ ಕೆಲವು ಚಿತ್ರಗಳ ಪ್ರದರ್ಶನ ಏರ್ಪಡಿಸುತ್ತಾರೆ. ಅದನ್ನೇ ಅನುಕರಿಸುವ ಯತ್ನ ಮಾಡುವ ಪ್ರಾಣಿಶಾಸ್ತ್ರದ ವಿಭಾಗದವರು ಜೂನಿಂದ ಪ್ರಾಣಿ ಎರವಲು ತಂದು ಪಾಡು ಪಡೆವ ರೀತಿ ನಗೆ ತರಿಸುತ್ತದೆ.

**SOME HOW ಸಂಜೀವಿನಿ ಪದ**

Some how ಎಂಬುದು ಬಹುಶಃ ಎಲ್ಲಾ ಕ್ಷೇತ್ರದ ಉನ್ನತ ಆಡಳಿತಗಾರರಿಗೆ ಬಹಳ ಪ್ರಿಯವಾದ ಪದ. ಕೆಳವರ್ಗದ ನೌಕರ, ಅಧಿಕಾರಿ ಯಾವುದೇ ಗಹನವಾದ ಸಮಸ್ಯೆ ಅವರ ಹತ್ತಿರ ಒಯ್ದರೂ' ಉತ್ತರ ಒಂದೇ "Some how you manage' ಇದನ್ನು ಬಿ.ಜಿ.ಎಲ್. ಸ್ವಾಮಿ ಕುರಿತೇಟಾಗಿ ವಿಡಂಬಿಸಿದ್ದಾರೆ. ಹೆಚ್ಚಿದ ಸಂಖ್ಯೆಯ ವಿದ್ಯಾರ್ಥಿಗಳಿಗೆ ಪರೀಕ್ಷೆ ಏರ್ಪಡಿಸಲು ಸ್ಥಳಾವಕಾಶ ಸಾಲದೆಂದು ಅಹವಾಲು ಒಯ್ದಾಗ ಬರುವ ಮಾಮೂಲು ಉತ್ತರ Some how... ಪರೀಕ್ಷೆಯ ದಿನ ಮೇಲಧಿಕಾರಿ ಬಂದು ನೋಡಿದರೆ, ಸ್ಥಳಾವಕಾಶ ವಿಲ್ಲದ ವಿದ್ಯಾರ್ಥಿಗಳಿಗೆಲ್ಲಾ ಹೊರಗಡೆ ಮರದ ನೆರಳಲ್ಲಿ ಬೆಂಚಿನ ವ್ಯವಸ್ಥೆ. ಕೆರಳಿ ಕೆಂಡವಾಗಿ 'ಏನ್ರೀ ಇವೆಲ್ಲಾ' ಎಂದಾಗ ಪ್ರಿನ್ಸಿಪಾಲರ ಬದಲು ''ಸರ್ ಒಳಗಿರುವುದೆಲ್ಲಾ ಸಮ್ ಹೊರಗಿರುವುದು ಹೌ ನೀವೇ ಹೇಳಿದ್ದರಲ್ಲಾ Some how you manage ಅಂತ''

**ಹಸುರು ಹೊನ್ನು; ಹಾಸ್ಯದ ಪರಿಪಕ್ವತೆ**

ಹಸುರು ಹೊನ್ನು ಸ್ವಾಮಿಯವರ ವಿಡಂಬನೆಯ ಪರಿಪಕ್ವತೆಯನ್ನು ಸಾರುವ ಕೃತಿ (ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ) ನೌಕರ ಶಾಹಿಯ ಕಿಡಿಗೇಡಿತನ ಇಲ್ಲೂ ಕೃತಿಯುದ್ದಕ್ಕೂ ನಿರೂಪಿತವಾದರೂ ಹಾಸ್ಯದ ವಿಶಿಷ್ಟ ರೂಪ ಕಾಣುವುದು ವಿದ್ಯಾರ್ಥಿಗಳೊಡನೆ ಸಸ್ಯಶಾಸ್ತ್ರಜ್ಞ ಬಿ.ಜಿ.ಎಲ್. ಸ್ವಾಮಿ ಶೈಕ್ಷಣಿಕ

ಪ್ರವಾಸಕ್ಕೆಂದು ಚಾಲಕುಡಿ, ತೇಕ್ಕಾಡಿ, ಆಗುಂಬೆ, ರಾಮೇಶ್ವರ ಮುಂತಾದ ನಿಸರ್ಗರಮ್ಯ ಕಾಡುಗಳಿಗೆ ಹೋದಾಗ ದಾಖಲಿಸಿದ ಅನುಭವಗಳಲ್ಲಿ ವಿಜ್ಞಾನದ ಬೆಳಕು ಸಾಹಿತ್ಯದ ಸೊಬಗು, ವಿಡಂಬನೆಯ ಮೋಜು, ಪ್ರವಾಸ ಕಥನದ ಬೆರಗು ಎಲ್ಲವು ಒಮ್ಮೆಲೇ ಅನುಭವವಾದಂತೆ ಆಗುತ್ತದೆ. ಸಮಯವನ್ನು ಸರಿಯಾಗಿ ಪಾಲಿಸದ ವಿದ್ಯಾರ್ಥಿಗಳು ಕೊಚಿನ್ ಎಕ್ಸ್‌ಪ್ರೆಸ್ 5-30ಕ್ಕೆ ನಿಲ್ದಾಣ ಬಿಡುತ್ತದೆ. 4-00ಕ್ಕೆ ಹಾಜರಿರಬೇಕು ಎನ್ನುವ ಆದೇಶವನ್ನು ಯಂತ್ರಗಳಂತೆ, ಡೈರಿಗಳಲ್ಲಿ ಬರೆದುಕೊಂಡು ತಡವಾಗಿ ಬರುತ್ತಾರೆ.

ಕಾಡನ್ನೆಲ್ಲಾ ವಿದ್ಯಾರ್ಥಿಗಳಿಗೆ ತೋರಿಸಿಬಿಡುತ್ತೇನೆ ಎಂದು ಕರೆದುಕೊಂಡು ಹೋದ ಮುದಿ ವಯಸ್ಸಿನ ಕನ್ಸರ್‌ವೇಟರ್ ಚಿತ್ರಣ ನಗೆ ಬುಗ್ಗೆಯೇ ಸರಿ. ಜತೆಯಲ್ಲಿದ್ದವರು ಯಾರಾದರೂ ಸೀನಿದರೆ ಯಾವುದೋ ಗಿಡದ ಎಲೆ ನುಂಗಿಸುವ, ಸಂಸ್ಕೃತವನ್ನೇ ರಾಷ್ಟ್ರಭಾಷೆಯಾಗಿಸುವ ಹಂಬಲ ಹೊತ್ತ ಹಳೆಯ ಕಾಲದ ಕನ್ಸರ್‌ವೇಟರ್‌ನ ಪಾತ್ರ ಚಿತ್ರಣ ಜೀವಂತವಾಗಿದೆ.

ವಿದ್ಯಾರ್ಥಿಗಳು ಪ್ರವಾಸದಲ್ಲಿ ಸಾಕಷ್ಟು ಉದ್ದವಾದ ಅನಪಿಲ್ಲಮ್ ಗಿಡವನ್ನು ಸಂಗ್ರಹಿಸುತ್ತಾರೆ. ಮುರಿದರೆ ಸಂಶೋಧನೆಗೆ ತೊಂದರೆಯಾದೀತೆಂದು ಗಿಡವನ್ನು ಚಟ್ಟದಂತೆ ಹೊತ್ತುಕೊಂಡು ಬಿಡದಿಗೆ ಬರುತ್ತಾರೆ. ಊರ ಜನರು ಸಾವು ನೋವು ಸಂಭವಿಸಿತೇನೋ ಎಂದು ಗಾಭರಿಯಿಂದ ವಿಚಾರಿಸುತ್ತಾರೆ. ಸತ್ಯ ಸಂಗತಿ ತಿಳಿದು ಕೋಪಗೊಳ್ಳುತ್ತಾರೆ.

ಹುಡುಗಿಯರು ಕಾಡಿನಲ್ಲಿ ಗೆಡ್ಡೆ ಗೆಣಸು ಸಂಗ್ರಹಿಸುತ್ತಾರೆ. ಅದನ್ನು ಬೇಯಿಸಿ ಅಡುಗೆ ಮಾಡುವ ಯೋಚನೆಯಿಂದ ಬಿಡದಿಗೆ ಬಂದು ಪಾಕ ಮಾಡಲು ಆರಂಭಿಸುತ್ತಾರೆ. ಹುಡುಗರು ಅದನ್ನು ಮ್ಯಾಕ್‌ಬೆತ್ ನಾಟಕದ ನಾಲ್ಕನೇ ಅಂಕದ ಮೊದಲನೆ ದೃಶ್ಯ ಎಂದು ಗೇಲಿ ಮಾಡುತ್ತಾರೆ. (ಮ್ಯಾಕ್‌ಬೆತ್ ನಾಟಕದ ಈ ಭಾಗದಲ್ಲಿ ಮೂವರು ಯಕ್ಷಿಣಿಯರು ಪ್ರಾಣಿಗಳನ್ನು ಕೊಂದು ಅವುಗಳ ವಿವಿಧ ಅಂಗಗಳನ್ನು ಬೆಂಕಿಯಲ್ಲಿ ಬೇಯಿಸುವ ವಿವರಣೆಯಿದೆ) ಸಂದರ್ಭದ ಸಾಮ್ಯವನ್ನು ಗಮನಿಸಿಕೊಂಡರೆ ಯಾರಿಗೆ ನಗೆ ಬಾರದಿರುತ್ತದೆ?

ಇಂಥ ಹಾಸ್ಯ ಕಾರಂಜಿ ಹಸುರು ಹೊನ್ನು ಕೃತಿಯಲ್ಲಿ ಪುಟ ಪುಟದಲ್ಲೂ ಸಿಗುತ್ತದೆ. ವಿದ್ಯಾರ್ಥಿಗಳ ಹಾಸ್ಯ, ಕೀಟಲೆ ಯಾವುದನ್ನು ಸ್ವಾಮಿ ಎಂದೂ ನೇತ್ಯಾತ್ಮಕವಾಗಿ ನೋಡುವುದಿಲ್ಲ. ವಿದ್ಯಾರ್ಥಿಗಳ ಮನೋಭಾವ, ನಡವಳಿಕೆಯನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳುವ ಗುಣದಿಂದಲೇ ಅವರು ಶಿಷ್ಯ ವತ್ಸಲರಾಗಿದ್ದಾರೆ.

ಹಸುರು ಹೊನ್ನು ಕೃತಿಗೆ ಮುಂಚೆ ಬರೆದ 'ದೌರ್ಗಂದಿಕಾಪಹರಣ' ಚಿಕ್ಕ ಹೊತ್ತಿಗೆಯಾಗಿದ್ದು ಬಹುಶಃ ಹಸುರು ಹೊನ್ನಿನಂಥ ದೊಡ್ಡ ಕೃತಿಗೆ ಮುನ್ನುಡಿಯಾಗಿ ಎಂಬಂತಿದೆ. ಮುಂದೆ ಬರೆದ 'ಸಾಕ್ಷಾತ್ಕಾರದ ಹಾದಿಯಲ್ಲಿ' ಕೃತಿಯಲ್ಲಿ ಹಲವು ದಿನಬಳಕೆ ಸಸ್ಯಗಳ ವಿವರಣೆ ಇದ್ದರೂ ಅದು 'ಹಸುರುಹೊನ್ನು' ಮಾದರಿಯ ಪ್ರವಾಸ ಕಥನವಲ್ಲ.

**ತಮಿಳು ತಲೆಗಳ ನಮವೆ:**

ತಮಿಳು ತಲೆಗಳ ನಮವೆ ಸ್ವಾಮಿಯವರ ಮತ್ತೊಂದು ಮಹತ್ವದ ವಿಡಂಬನೆಯ ಕೃತಿ ಒಂದು ಭಾಷೆ, ಸಂಸ್ಕೃತಿಗಳ ಸಂಶೋಧನೆಗಳಂತಹ ಮಹತ್ವದ ವಿಚಾರವನ್ನು ವೈಚಾರಿಕವಾದ ಅಧ್ಯಯನಕ್ಕೆ ಮೀಸಲಿರಿಸದೆ ಬರೀ ಸ್ತೋತ್ರ ಮಾಡುವ, ಬಾಹ್ಯ ರೂಪವನ್ನೂ, ಅದರ ಹಳಮೆಯನ್ನೂ ಮೆಚ್ಚಿ ಕೊಚ್ಚಿ ಕೊಂಡಾಡುವ ಎಲ್ಲರಿಗೂ ಇಲ್ಲಿ ನೀತಿ ಪಾಠವಿದೆ. ತಮಿಳು ಸಾಹಿತ್ಯದ ಮಹತ್ವದ ಕಾಲವಾದ ''ಸಂಗ ಕಾಲ''ವನ್ನು ಆಧರಿಸಿ - ಸಂಗಕಾಲದಲ್ಲಿ ಮಕ್ಕಳು, ಹೆಂಗಸರು, ಮುದುಕರು ಹೀಗೆ ವಿಷಯದ ಸಾಮಾನ್ಯ ಮಗ್ಗಲುಗಳನ್ನೇ ಆಧರಿಸಿ ಡಾಕ್ಟರೇಟ್ ಪ್ರಬಂಧ ಸಿದ್ಧಪಡಿಸಿ ತನ್ಮೂಲಕ ಆ ಪದವಿಯ ಘನತೆಯನ್ನೇ ತಗ್ಗಿಸುವ ಅಧ್ಯಾಪಕ ಗಣ, ಒಂದು ಸಾಹಿತ್ಯ ಕೃತಿ ಪ್ರಾಚೀನವಾದದ್ದಲ್ಲವೆಂದು ಆಧಾರ ಸಹಿತವಾಗಿ ವಿಚಾರ ಗೋಷ್ಠಿಯಲ್ಲಿ ವಿವರಿಸಿದಾಗ ಕೋಪಗೊಂಡು ಭಾಷಣಕಾರರಿಗೆ ಹೊದಿಸಲೆಂದು ತಂದಿದ್ದ ಶಾಲನ್ನು ವಾಪಸು ತೆಗೆದುಕೊಂಡು ಹೋಗುವ ಅಸೌಜನ್ಯ ವ್ಯಕ್ತಪಡಿಸುವ ಕಾರ್ಯಕ್ರಮ ವ್ಯವಸ್ಥಾಪಕ ಇವರೆಲ್ಲರ ಚಿತ್ರಣ ನಗೆ ತರಿಸುವುದರೊಂದಿಗೆ ಭಾಷೆ, ಸಂಸ್ಕೃತಿಗಳ ನಿಜವಾದ ಶತ್ರುಗಳು ಯಾರು ಎಂಬುದನ್ನೂ ಸ್ಪಷ್ಟಪಡಿಸುತ್ತವೆ.

**ವಿಡಂಬನೆಯ ಪದಸೃಷ್ಟಿ: ವ್ಯಂಗ್ಯಚಿತ್ರ**


ಬಿ.ಜಿ.ಎಲ್. ಸ್ವಾಮಿಯವರ ವಿಡಂಬನೆಯ ಶೈಲಿಗೆ ಇಂಬುಗೊಟ್ಟಿರುವ ಇನ್ನೂ ಎರಡು ಅಂಶಗಳೆಂದರೆ, ಒಂದು ಬಹುಪಾಲು ಅವರೇ ಬರೆದಿರುವ ವ್ಯಂಗ್ಯಚಿತ್ರಗಳು ಸಂದರ್ಭೋಚಿತವಾಗಿದ್ದು ನಗೆ ಉಕ್ಕಿಸಲು ಸಹಾಯಕವಾಗಿದೆ. ಮತ್ತೊಂದು ಅಂಶ ವಿಶಿಷ್ಟಪದ/ಪದ ಪುಂಜಗಳ ಬಳಕೆ ಬದಲು ನೀಡು, ತೊಂಗಿಬಿಡು, ಎದುರಿ, ಘಾಟಿಸು ಮುಂತಾದ ಹೊಸಬಗೆ ಪ್ರಯೋಗ ಗಮನ ಸೆಳೆಯುತ್ತದೆ. ಕಛೇರಿ ಮ್ಯಾನೇಜರ್ ಮತ್ತು ಹೆಡ್ ಗುಮಾಸ್ತೆ ಈ ಒಬ್ಬರನ್ನೂ ಕೃತಿಯುದ್ದಕ್ಕೂ ಕರಟಕ, ದಮನಕರೆಂದೇ ಹೆಸರಿಸಿದ್ದಾರೆ. ಕೆಲವು ಅಧ್ಯಾಯಗಳಿಗೆ ಶೀರ್ಷಿಕೆ ನೀಡುವಾಗ ದಾಸರ ಪದದ ಸಾಲನ್ನೋ ಗಾದೆ ಮಾತನ್ನೋ ಅಂತರ್ ದನಿಯನ್ನಾಗಿ ಬಳಸಿದ್ದಾರೆ. ಕಾಲೇಜು ರಂಗದ ಆಡಿಟರ್ ದಾಂಧಲೆ ಅಧ್ಯಾಯಕ್ಕೆ ನೀಡಿರುವ ''ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ'' ಎಂಬ ಶೀರ್ಷಿಕೆ ನಗೆ ತರಿಸುತ್ತದೆ ''ವಿದ್ಯಾರ್ಥಿ(ಶ) ನಿವೇಶನದಲ್ಲಿ'' ಎಂಬ ಹಾಸ್ಟಲ್ ವಾರ್ಡನ್ ಆಗಿ ತಾವು ಪಟ್ಟ ಪಾಡನ್ನು ಅಧ್ಯಾಯದಲ್ಲಿ ಯಾಕೆನ್ನನೀ ರಾಜ್ಯಕೆ ಎಳೆ ತಂದೆ ಹರಿಯೇ ಎನ್ನ ಕುಲದವರಿಲ್ಲ, ಎನಗೊಬ್ಬ ಹಿತರಿಲ್ಲ ಮನ್ನಿಸುವ ದೊರೆಯಿಲ್ಲ ಮನಕೆ ಜಯವಿಲ್ಲ, ಹೊನ್ನು, ರನ್ನಗಳಿಲ್ಲ, ಒಲಿಸಿಕೊಂಬುವರಿಲ್ಲ ಎಂದು ಪ್ರಲಾಪಿಸಿದ್ದಾರೆ.

**ಬಿ.ಜಿ.ಎಲ್. ವಿಡಂಬನಾ ಸಾಹಿತ್ಯ: ಸಾಧನೆಯ ಹಾದಿ**

ಸ್ವಾಮಿಯವರು ಸೃಷ್ಟಿಸಿರುವ ವಿಡಂಬನೆಯ ವಿಕಾಸದ ಹಾದಿಯನ್ನು ಅವರ ಕೃತಿಗಳ ಹೆಜ್ಜೆ ಗುರುತುಗಳಿಂದಲೇ ಮಾಡಬಹುದಾಗಿದೆ. ಮೊದಲ ಕೃತಿ 'ಅಮೆರಿಕದಲ್ಲಿ ನಾನು'

ಬರೆದಿದ್ದು ಹಾರ್ವರ್ಡ್ ವಿಶ್ವ ವಿದ್ಯಾಲಯದಲ್ಲಿ ಸಸ್ಯಶಾಸ್ತ್ರ ಕುರಿತು ಸಂಶೋಧಿಸುತ್ತಿದ್ದಾಗ, ಅದು ಅವರ ಬರವಣಿಗೆಯ ಮೊದಲ ಘಟ್ಟ, ಅಮೆರಿಕನ್ ಸಂಸ್ಕೃತಿಯ, ಜನರ ನಡವಳಿಕೆಯ ಸೂಕ್ಷ್ಮ ಚಿತ್ರಣ ಇಲ್ಲಿದೆ. ಹಡಗಿನ ಪ್ರಯಾಣ ಮತ್ತು ಅಮೆರಿಕನ್ ಜನಜೀವನದ ಕುರಿತ ಹಾಸ್ಯವಿದೆ ಇಷ್ಟು ಈ ಕೃತಿಯ ಸಾರ. ಮುಂದಿನ ಕೃತಿ ''ಪಂಚಕಲಶಗೋಪುರ'' ದಲ್ಲಿ ಬೆಂಗಳೂರಿನ ಇತಿಹಾಸ ಪ್ರಸಿದ್ಧ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ ಮತ್ತು ಅದನ್ನು ಪೋಷಿಸಿದ ದಿಗ್ಗಜಗಳನ್ನು ಕುರಿತದ್ದು. ಸ್ವಾಮಿಯವರ ಹಾಸ್ಯಪ್ರಜ್ಞೆ ಬೇರೂರಿರುವುದನ್ನು ಇಲ್ಲಿ ಕಾಣಬಹುದು. ಕಾಲೇಜು ರಂಗ, ಕಾಲೇಜು ತರಂಗ. ಪ್ರಾಧ್ಯಾಪಕನ ಪೀಠದಲ್ಲಿ ಕಾಲೇಜು ಜೀವನದಲ್ಲಿ ಅವರು ಅನುಭವಿಸಿದ ವಿಷಯಗಳ ವಿಡಂಬನಾತ್ಮಕ ಸ್ವರೂಪ ಕಾಣಬಹುದಾಗಿದೆ. ಹಸುರು ಹೊನ್ನು ಕೃತಿ ಬರೆಯುವ ಹೊತ್ತಿಗೆ ಹಾಸ್ಯ ಒಂದು ಪರಿಪಕ್ವ ಸ್ಥಿತಿಯನ್ನು ತಲುಪುತ್ತದೆ. ವಿಜ್ಞಾನದ ವಿಷಯವನ್ನು ಹಾಸ್ಯದ ಲೇಪನದಲ್ಲಿ ಚಿತ್ರಿಸುವಲ್ಲಿ ಯಶಸ್ವಿಯಾಗುತ್ತಾರೆ. ಮುಂದಿನ ಕೃತಿಗೆ ಈ ಶೈಲಿ ಸ್ಥಾಯಿಯಾಗುತ್ತದೆ.

ಸಸ್ಯಶಾಸ್ತ್ರ ಶಾಸನ ಶಾಸ್ತ್ರ ಭಾಷಾ ಶಾಸ್ತ್ರ ಸಂಗೀತ, ಸಾಹಿತ್ಯ, ಶಿಕ್ಷಣ ಮುಂತಾದ ಕ್ಷೇತ್ರದಲ್ಲಿ ಅನನ್ಯ ಸಾಧನೆ ಮಾಡಿದ ಬಿ.ಜಿ.ಎಲ್. ಸ್ವಾಮಿಯವರಿಂದ ಸಾಹಿತ್ಯಾಸಕ್ತ ಕನ್ನಡಿಗರು ಇನ್ನೂ ನಿರೀಕ್ಷಿಸುತ್ತಿರುವಾಗಲೇ ಅವರು ಕಾಲವಾದುದು ಸೃಷ್ಟಿಯ ಒಂದು ವಿಡಂಬನೆಯೇ ಸರಿ. ಈ ಲೇಖನದ ಯತ್ನದಿಂದ ಅವರು ಸೃಷ್ಟಿಸಿರುವ ವಿಡಂಬನೆಯ ಬೃಹತ್ ಲೋಕದ ಇಣುಕು ನೋಟವಾದರೂ ಸಿಕ್ಕರೆ ಶ್ರಮ ಸಾರ್ಥಕವಾದಂತೆ.



# ಡಾ॥ 'ರಾಶಿ'ಯವರ ಮರೆಯಲಾಗದ ಹಿತೋಕ್ತಿ

- ಬಿ.ವಿ. ರಾಜಗೋಪಾಲ್

1954ನೇ ಇಸವಿ, ಮೇ ತಿಂಗಳು ಆಗ ನನಗಿನ್ನೂ ಹದಿನೆಂಟು ವರ್ಷ ವಯಸ್ಸು. ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಗುತ್ತೋ ಇಲ್ಲವೋ ಅನ್ನೋ ಸಂಶಯದಿಂದ, ನಾನು ಮೈಸೂರಿನ ಯುವರಾಜ ಕಾಲೇಜಿನಲ್ಲಿ ಸೈನ್ಸ್ ಬಿ.ಎಸ್ಸಿ. ಕೋರ್ಸ್‌ಗೆ ಸೇರಿಬಿಟ್ಟಿದ್ದೆ. 1955ನೇ ಇಸವಿಯಲ್ಲಿ, ಬೆಂಗಳೂರಿನಲ್ಲಿ ಹೊಸ ಮೆಡಿಕಲ್ ಕಾಲೇಜು ಪ್ರಾರಂಭವಾಗುವ ಸುದ್ದಿ ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅತ್ಯಂತ ಹೆಸರುವಾಸಿಗಳಾದ, ಬೆಂಗಳೂರಿನಲ್ಲಿ ಖಾಸಗಿ ವೈದ್ಯವೃತ್ತಿ ನಡೆಸುತ್ತಿದ್ದ, ಸಪ್ತ ಋಷಿಗಳಿಗೆ ಸಮಾನರಾದ, ಸಪ್ತ ವೈದ್ಯರುಗಳು ಒಟ್ಟುಗೂಡಿ ನಮ್ಮ ರಾಜ್ಯದ ಅರ್ಹತೆಯುಳ್ಳ ಇಂಟರ್‌ಮೀಡಿಯೆಟ್ ಪಾಸುಮಾಡಿರುವ, ವೈದ್ಯರಾಗಲು ಅಭಿಲಾಷೆಯುಳ್ಳ ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡುವ ಅವಕಾಶ ಮಾಡಿಕೊಡಬೇಕೆಂದು ಮೆಡಿಕಲ್ ಕಾಲೇಜನ್ನು ಪ್ರಾರಂಭಿಸಿದರು. ಎಲ್ಲಾ ಅನುಕೂಲಗಳನ್ನು ಸಿದ್ಧಪಡಿಸಿ, ಸರ್ಕಾರದ ಮತ್ತು ಐ.ಎಂ.ಸಿ.ಯವರ ಪರವಾನಗಿ ಪಡೆದು, ಅತಿ ಅನುಭವ ಪಡೆದ ಅಧ್ಯಾಪಕರನ್ನು ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೆ ನೇಮಕ ಮಾಡಿ, ಹೊಸ ಕಟ್ಟಡವನ್ನು ವಿಕ್ಟೋರಿಯಾ ಆಸ್ಪತ್ರೆ ಪಕ್ಕದಲ್ಲಿಯೇ ನಿರ್ಮಿಸಿ ನನ್ನಂತಹ ಅನೇಕ ವಿದ್ಯಾರ್ಥಿಗಳನ್ನು ವೈದ್ಯರನ್ನಾಗಿ ಮಾಡಿದ ಪ್ರಾತಃಸ್ಮರಣೀಯ ಪುಣ್ಯಾತ್ಮರಾದರು.

ಈ ಸಪ್ತ ವೈದ್ಯ ಮಹರ್ಷಿಗಳಲ್ಲಿ, ಬೆಂಗಳೂರಿನ ಪ್ರಸಿದ್ಧ ವೈದ್ಯರಾಗಿದ್ದ ಡಾಕ್ಟರ್ ಎಂ. ಶಿವರಾಂರವರು, ಕಾಲೇಜಿನ ಪ್ರಾರಂಭ ಮತ್ತು ಮೊದಲ ಮೂರು ವರ್ಷಗಳ ಅಡ್ಮಿನಿಸ್ಟ್ರೇಷನ್ ನಡೆಸಿದ ಮಹಾನ್ ವ್ಯಕ್ತಿಗಳು. ''ರಾಶಿ'' ಎಂಬ ಹೆಸರಿನಿಂದ ಜನಪ್ರಿಯರಾದವರು. ಡಾ॥ ಎಂ. ಶಿವರಾಂರವರು ಬಹುಮುಖ ವ್ಯಕ್ತಿಗಳಾಗಿದ್ದರು. ಪ್ರಸಿದ್ಧ ವೈದ್ಯರು ಮಾತ್ರವಲ್ಲದೆ, ಕಾದಂಬರಿಕಾರರು, ಹಾಸ್ಯ ಪ್ರಧಾನವಾದ ಬರಹಗಾರರು ಮತ್ತು ಭಾಷಣಕಾರರು, ಉತ್ತಮ ಟೆನಿಸ್ ಆಟಗಾರರು ಆಗಿದ್ದರು. ಅನೇಕ ವೈದ್ಯಕೀಯ, ಸಾಮಾಜಿಕ, ಸಾಂಸ್ಕೃತಿ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇಂತಹ ವ್ಯಕ್ತಿ ಯಾರಿಗೆ ಬೇಡ?

ನನ್ನ ಮರೆಯಲಾಗದ ಒಂದು ಅನುಭವವನ್ನು ಇಲ್ಲಿ ಹೇಳ ಬಯಸುತ್ತೇನೆ. ನನಗೆ ಚಿಕ್ಕ ವಯಸ್ಸಿನಿಂದಲೂ ಡಾಕ್ಟರ್ ಆಗಬೇಕೆಂಬ ಆಸೆ ಬಹುವಾಗಿತ್ತು. ಈ ವಿಷಯ ನನ್ನ

ತಂದೆಯವರಾದ ಪ್ರಸಿದ್ಧ ಆಯುರ್ವೇದ ವೈದ್ಯರಾಗಿದ್ದ ಬಿ.ವಿ. ಪಂಡಿತ್‌ರವರಿಗೂ ತಿಳಿದಿತ್ತು. ಎಲ್ಲಾ ಒಟ್ಟುಗೂಡಿದರೆ, ನನ್ನನ್ನು ''ಡಾಕ್ಟರ್'' ಮಾಡಲು ಅವರೂ ಮನಸ್ಸು ಮಾಡಿದ್ದರು.

ನಾನು 1954 ರಲ್ಲಿ ಮೈಸೂರಿನಲ್ಲಿ ಬಿ.ಎಸ್ಸಿ. ಕೋರ್ಸ್ ಸೇರಿದ್ದಾಗ, 1955ನೇ ಇಸವಿಯಲ್ಲಿ ಪ್ರಾರಂಭವಾಗುವ ಬೆಂಗಳೂರು ಮೆಡಿಕಲ್ ಕಾಲೇಜು ವಿಷಯ ನಮ್ಮ ತಂದೆಯವರಿಗೆ ತಿಳಿಯಿತು. ಆಗ ಅವರು ಕೂಡಲೇ ನನ್ನನ್ನು ಬೆಂಗಳೂರಿಗೆ ಡಾ|| ಎಂ. ಶಿವರಾಂರವರನ್ನು ಭೇಟಿ ಮಾಡಲು ಕರೆದುಕೊಂಡು ಹೋದರು. ಅವರ ಮನೆಯಲ್ಲಿ ಸ್ವಲ್ಪ ಹೊತ್ತು ಕಾಯುತ್ತಿದ್ದಾಗ 'ರಾಶಿ' ಯವರು ತಮ್ಮ ಕತ್ತಿನ ಸುತ್ತ ಸ್ಟೆತೋಸ್ಕೋಪನ್ನು ಧರಿಸಿ ಬಂದು ನಮ್ಮನ್ನು ಏನಾಗಬೇಕೆಂದು ವಿಚಾರಿಸಿದರು. ನಮ್ಮ ತಂದೆಯವರು ತಮ್ಮ ಪರಿಚಯವನ್ನು ಮಾಡಿಕೊಂಡು ಬಂದ ವಿಷಯವನ್ನು ಸೂಕ್ಷ್ಮವಾಗಿ ತಿಳಿಸಿದಾಗ, 'ರಾಶಿ'ಯವರು ನಗೆಮುಖ ಮಾಡಿಕೊಂಡು, ವೈದ್ಯ ಪಂಡಿತರೇ ನನ್ನ ಮನೆಗೆ ಬಂದಿರುವಾಗ ಈ ಸ್ಟೆತೋಸ್ಕೋಪಿನ ಉಪಯೋಗ ಇನ್ನೆಲ್ಲಿ ಎಂದು ತಮಾಷೆ ಮಾಡಿ ಅದನ್ನು ಪಕ್ಕಕ್ಕಿರಿಸಿ, ನಮ್ಮೆಲ್ಲರ ಕ್ಷೇಮ ಸಮಾಚಾರವನ್ನು ಅತಿ ವಿಶ್ವಾಸದಿಂದ ವಿಚಾರಿಸಿದರು.

ನನ್ನ ತಂದೆಯವರು ಮಗನಿಗೆ ಸೀಟು ಕೇಳುವ ವಿಷಯಕ್ಕೆ ಬಂದಿದ್ದೇನೆ. ಹುಡುಗ ಇಂಟರ್‌ಮೀಡಿಯೆಟ್ ಫಸ್ಟ್‌ಕ್ಲಾಸ್‌ನಲ್ಲಿ ಪಾಸು ಮಾಡಿದ್ದಾನೆ. ಅವಕಾಶವಿದ್ದರೆ ಕಾಲೇಜು ಸೇರಲು ಸಿದ್ಧನಾಗಿದ್ದಾನೆ ಎಂದು ತಿಳಿಸಿದರು.


ಕೂಡಲೇ ''ಡಾ|| ರಾಶಿ''ಯವರು ನನ್ನ ಸರ್ಟಿಫಿಕೇಟ್‌ಗಳನ್ನು ಪರೀಕ್ಷೆ ಮಾಡಿ, ಸಮಾಧಾನ ವ್ಯಕ್ತಪಡಿಸಿ, ನನಗೆ ಸೀಟ್ ಕೊಡುವ ಒಪ್ಪಿಗೆಯನ್ನು ನನ್ನ ತಂದೆಯವರಿಗೆ ತಿಳಿಸಿದರು. ನನ್ನ ಕಡೆ ತಿರುಗಿ, ನಾನು ಆಗ ಏನು ಮಾಡುತ್ತಿದ್ದೇನೆಂದು ವಿಚಾರಿಸಿದರು. ಆಗ ನಾನು ಮೈಸೂರಿನಲ್ಲಿ ಬಿ.ಎಸ್ಸಿ. ಕೋರ್ಸ್‌ಗೆ ಸೇರಿ ಪ್ರಥಮ ವರ್ಷದಲ್ಲಿದ್ದೇನೆಂದು ತಿಳಿಸಿದಾಗ, ''ರಾಶಿ''ಯವರು ನನ್ನ ಬೆನ್ನಿನ ಮೇಲೆ ಕೈಯಿಟ್ಟು, ನಾನು ಎಂದೂ ಮರೆಯಲಾಗದ ಕೆಲವು ಮಾತುಗಳನ್ನು ಹೇಳಿದರು ಅದು ಏನೆಂದರೆ,

''ನೋಡು, ನಾನು ಕೊಡುವ ಮೆಡಿಕಲ್ ಸೀಟು ನಿನಗೆ ಖಾತರಿಯಾಗಿದೆ ನಿನಿನ್ನೂ ಚಿಕ್ಕವನು ನೀನು ಈಗ ಬಿ.ಎಸ್ಸಿ. ಕೋರ್ಸ್ ಸೇರಿರುವುದರಿಂದ ಅದನ್ನು ಕಂಪ್ಲೀಟ್ ಮಾಡಿ, ಡಿಗ್ರೀ ಪಡೆದುಕೋ. ನಿನ್ನನ್ನು 56ನೇ ಇಸವಿ, ಎರಡನೇ ಬ್ಯಾಚಿಗೆ ಸೇರಿಸ್ತೀನಿ ಅಷ್ಟು ಹೊತ್ತಿಗೆ ನಿನ್ನ ಮಿದುಳು ಇನ್ನೂ ಬಲಿಯುತ್ತೆ, ವಿಶ್ಲೇಷಣಾ ಶಕ್ತಿ ಹೆಚ್ಚಿರುತ್ತೆ. ಸುಲಭವಾಗಿ ಮೆಡಿಕಲ್ ಕಾಲೇಜನ್ನು ದಾಟುತ್ತೀಯ. ಎರಡು ಡಿಗ್ರಿಗಳು ಬಂದ ಹಾಗಾಗುತ್ತೆ. ನಾನು ಹೇಳಿದ ಹಾಗೆ ಮಾಡು ಎಂದು ಹರಸಿದರು ''ನನ್ನ ತಂದೆಯವರೂ ಕೂಡ 'ರಾಶಿ'ಯವರ ಹಿತೋಕ್ತಿಯನ್ನು ಕೇಳಿ ಶ್ಲಾಘಿಸಿದರು.''

''ರಾಶಿ''ಯವರ ಮಾತು ಸಂಪೂರ್ಣವಾಗಿ ಸತ್ಯವಾಗಿತ್ತು. ಮೆಡಿಕಲ್ ಕಾಲೇಜನ್ನು ಎಲ್ಲೂ ಫೇಲಾಗದೆ ದಾಟಿದೆ. ಕೋರ್ಸ್ ನಡೆಸುತ್ತಿದ್ದಾಗ ನನ್ನ ಧೈರ್ಯ, ವಿವೇಚನಾ ಶಕ್ತಿ, ಗಂಭೀರ ನಡತೆ ಎಲ್ಲವೂ ಹೆಚ್ಚಾಗಿತ್ತು. ''ಬೆಸ್ಟ್ ಔಟ್ ಗೋಯಿಂಗ್ ಸ್ಟೂಡೆಂಟ್'' ಎಂಬ ಸರ್ಟಿಫಿಕೇಟ್ ಕೂಡ ಗಳಿಸಿದೆ.

''ರಾಶಿ'' ಯವರಂಥ ಮಹಾನ್ ವ್ಯಕ್ತಿಯಿಂದ ಆಶೀರ್ವಾದ ಪಡೆದು, ಅವರ ಅನುಗ್ರಹದಿಂದ ವೈದ್ಯನಾಗಿ, ಈಗಾಗಲೇ 5 ದಶಕಗಳಾದವು. ತಜ್ಞ ವೈದ್ಯನಾಗಿ ಬಾಳುತ್ತಿದ್ದೇನೆ. ನನ್ನ ಮನಸ್ತೃಪ್ತಿಯಾಗಿ ವೈದ್ಯ ವೃತ್ತಿಯನ್ನು ನಡೆಸಿದ್ದೇನೆ. ನಾನು ಕಾಲೇಜು ಸೇರುವ ಮೊದಲು ''ರಾಶಿ''ಯವರು ನನ್ನ ಬೆನ್ನು ತಟ್ಟಿ ಹೇಳಿದ ಹಿತೋಕ್ತಿಯನ್ನು ಸದಾ ಸ್ಮರಿಸುತ್ತಿರುತ್ತೇನೆ.

''ರಾಶಿ''ಯವರ ಮುಂದಾಳತ್ವದಲ್ಲಿ ಪ್ರಾರಂಭವಾದ ಬೆಂಗಳೂರು ಮೆಡಿಕಲ್ ಕಾಲೇಜು ಈ ವರ್ಷ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಏಳು ಸಾವಿರಕ್ಕೂ ಹೆಚ್ಚು ವೈದ್ಯರು ನಮ್ಮ ಕಾಲೇಜಿನಿಂದ ಹೊರಬಂದು ವೈದ್ಯರಾಗಿ ನಮ್ಮ ದೇಶವಲ್ಲದೇ, ಪ್ರಪಂಚದಾದ್ಯಂತ ಸೇವೆ ಸಲ್ಲಿಸುತ್ತಿದ್ದಾರೆ. ಇದಕ್ಕಿಂತ ಹೆಮ್ಮೆಯ ವಿಷಯ ಬೇರೆ ಏನಿದೆ?



# ಆಟೋಗ್ರಾಫ್ ಪ್ಲೀಸ್....

– ಗುರು

ಭಾರತದಲ್ಲಿ ದೂರದರ್ಶನ ಆರಂಭವಾದಾಗ ಮೊದಲು ಹಿಂದಿ ಭಾಷೆಯಲ್ಲಿ ಕಾರ್ಯಕ್ರಮಗಳು ಶುರುವಾದವು. ಯಾವ ರೀತಿಯ ಕಾರ್ಯಕ್ರಮಗಳನ್ನು ಇಂತಹ ನೂತನ ಕ್ಷೇತ್ರದಲ್ಲಿ ಪ್ರಸಾರ ಮಾಡಬಹುದು ಎಂಬ ರೂಪುರೇಷೆ ಸಿದ್ಧಗೊಂಡಿತು. ಈ ರೂಪುರೇಷೆಗಳಿಗೆ ಮಾದರಿಯಾಗಿದ್ದು ಇಂಗ್ಲಿಷ್ ಚಾನಲ್ಲುಗಳು. ಸುಮಾರು ಅಲ್ಲಿ ಪ್ರಸಾರವಾಗುತ್ತಿದ್ದ ಕಾರ್ಯಕ್ರಮಗಳೇ ಇಲ್ಲಿಯೂ ತನ್ನ ಹೊರ ಅವತಾರ ಕಳೆದುಕೊಂಡು ಲೋಕಲೈಸ್ ಆದವು. ಅಂದರೆ ''ಅವಳ ಚೆಡ್ಡಿ ಇವಳಿಗಿಟ್ಟು ಇವಳ ಲಂಗ ಅವಳಿಗೆ ತೊಡಿಸಿ...'' ಪ್ರಯೋಗಗಳಾದವು. (ಪೂಜ್ಯ ಬಿ.ಎಂ.ಶ್ರೀಯವರು ಇಂಗ್ಲಿಷ್ ಗೀತೆಗಳನ್ನು ಅನುವಾದಿಸಿ ಪ್ರಕಟಿಸಿದಾಗ ನಮ್ಮ ಆಗಿನ ಹಳೆಯ ತಲೆಮಾರಿನ ಕವಿಗಳೊಬ್ಬರು ಈ ಹೊಸಗವಿತೆಗಳನ್ನು ಹೀಗೆ ಅಣಗಿಸಿ ಏನೋಪ್ಪಾ ನಮಗಿದೆಲ್ಲಾ ತಿಳೀದು.... ಅಂದರಂತೆ.)

ಹಿಂದಿ ಭಾಷೆಯಲ್ಲಿ ಕಾರ್ಯಕ್ರಮಗಳು ಶುರುವಾದ ಎಷ್ಟೋ ವರ್ಷಗಳ ನಂತರ ಕನ್ನಡದ ಸರ್ಕಾರೀ ವಾಹಿನಿಗಳ ಕಾರ್ಯಕ್ರಮಗಳು ಕಾಲಕ್ರಮೇಣ ನೀರಸಗೊಂಡು ರಾಯರ ಕುದುರೆ ಕತ್ತೆಯಾಗಿ ಹಾಳೂರಿಗೆ ಉಳಿದವರ ರೀತಿಯಾಗಿತ್ತು. ಇದರ ಪ್ರಯೋಜನವನ್ನು ಸಫಲವಾಗಿ ಪಡೆದುಕೊಳ್ಳಲು ಖಾಸಗಿ ಚಾನಲ್ಲುಗಳು ಪೈಪೋಟಿ ಆರಂಭಿಸಿದವು. ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತೀಯ ಭಾಷೆಗಳಲ್ಲಿ ತನ್ನ ಕಾರ್ಯಕ್ರಮಗಳನ್ನು ಆಗಲೇ ಪ್ರಸಾರ ಮಾಡಿ ಅನುಭವ ಗಳಿಸಿದ್ದ ಈ ಟೀವಿ ಕನ್ನಡ ಕಾರ್ಯಕ್ರಮಗಳಿಗೂ ಕೈ ಹಾಕಿತು. ಹಿಂದಿ ಚಾನಲ್ಲುಗಳ ಮೂಲ ಇಂಗ್ಲಿಷ್ ಕಾಪಿ ಅವರ ಬಳಿ ಆಗಲೇ ಚಾಲ್ತಿಯಲ್ಲಿದ್ದು ಅದನ್ನು ತೆಲುಗು ಮತ್ತು ಇತರ ಭಾಷೆಗಳಲ್ಲಿ ಪ್ರಯೋಗಿಸಿ ಯಶಸ್ವಿಯಾಗಿದ್ದರು. ಲೋಕಾರೂಢಿಯಂತೆ ಯಾವುದು ಬೇರೆ ಕಡೆ ಯಶಸ್ವಿಯೆನಿಸುತ್ತದೋ ಅದು ಇಲ್ಲೂ ಬರಬೇಕು ತಾನೇ? ಹೀಗೆ ಬಂದ ಹಲವಾರು ಕಾರ್ಯಕ್ರಮಗಳಲ್ಲಿ ಒಂದು ಕಾರ್ಯಕ್ರಮ ''ಆಟೋಗ್ರಾಫ್ ಪ್ಲೀಸ್...'' ಎನ್ನುವುದು.

ಈ ಟೀವಿ ಚಾನಲ್ಲಿನಲ್ಲಿ ಭಾನುವಾರಗಳಂದು ಬೆಳಗಿನ ಹೊತ್ತು ಮತ್ತು ಆಗಾಗ್ಗೆ ಬೇರೆ ದಿನಗಳಲ್ಲಿ ಸಂಜೆ ಹೊತ್ತೂ ಇದೇ ಕಾರ್ಯಕ್ರಮ ಬಿತ್ತರಗೊಳ್ಳುತ್ತದೆ. ಸಾಮಾನ್ಯವಾಗಿ ಇದರಲ್ಲಿ ಚಲನಚಿತ್ರ ರಂಗಕ್ಕೆ ಸಂಭಂಧಿಸಿದವರೇ ಹೆಚ್ಚಿರುತ್ತಾರೆ. ಅದು ಕ್ಯಾಮರಾಮನ್ ಇರಬಹುದು, ಪೋಷಕ ನಟರಿರಬಹುದು, ಕಾಮೆಡಿ ನಟರಿರಬಹುದು, ಸಂಭಾಷಣಾಕಾರರಿರಬಹುದು, ಸಂಗೀತ ನಿರ್ದೇಶಕರು ಇರಬಹುದು.... ಹೀಗೇ ಅಂತ ಕಟ್ಟುಪಾಡುಗಳೇನೂ ಇರುವುದಿಲ್ಲ. ಕಾರ್ಯಕ್ರಮದ ನಿರೂಪಕರು ಅಂದಿನ ಗಣ್ಯರ ಬಗ್ಗೆ ಹೇಳಿ, ಅವರನ್ನು ವೇದಿಕೆಗೆ ಕರೆತಂದು ಅವರನ್ನು ಸಂದರ್ಶಿಸುವ ಮುನ್ನ ಅವರ ಬಾಲ್ಯಕಾಲದ ಚಿತ್ರಗಳಿಂದ ಶುರುಮಾಡಿ ಈಚಿನವರೆಗಿನ ಚಿತ್ರವನ್ನೂ ತೋರಿಸುತ್ತಾರೆ. ಪರಿಚಯದ ನಡುವೆ ಗಣ್ಯರ ಬಂಧುಗಳು, ಮಿತ್ರರು, ಆಪ್ತರು... ಹೀಗೆ ಹಲವರನ್ನು -

ಗಣ್ಯರ ಮೇಲೆ ಪ್ರಭಾವ ಬೀರಿದವರನ್ನು- ಪರಿಚಯಿಸಿ ಸಂದರ್ಶಿಸಲಾಗುತ್ತದೆ. ಈ ರೀತಿ ಪರಿಚಯಿಸುವವರನ್ನು ಗಣ್ಯರ ಅರಿವಿಗೆ ಬಾರದ ಹಾಗೆ ಅಲ್ಲಿ ಕರೆತಂದಿರುವಂತೆ, ಅಲ್ಲಿ ತೋರಿಸುವ ಚಿತ್ರಗಳನ್ನೂ ಗಣ್ಯರ ಅರಿವಿಗೆ ಬಾರದ ಹಾಗೆ ಸಂಗ್ರಹ ಮಾಡಿದಂತೆ ಬಿಂಬಿಸಲು ಯತ್ನಿಸಿದರೂ ಪೂರ್ತಾ ಕಾರ್ಯಕ್ರಮ ಸ್ಟೇಜ್ ಮೇನೇಜ್ ಮಾಡಿರುವುದು ಎದ್ದು ಕಂಡುಬಿಡುತ್ತದೆ!

ಈ ಕಾರ್ಯಕ್ರಮ ನೋಡುತ್ತಿರುವಾಗ್ಗೆ ಥಟ್ಟನೆ ನಮ್ಮ ನೆನಪಿಗೆ ಜೀ ಟೀವಿಯ ''ಜೀನಾ ಇಸೀ ಕಾ ಬಾತ್'' ಕಾರ್ಯಕ್ರಮ ನುಗ್ಗುತ್ತದೆ. ''ಜೀನಾ ಇಸೀ ಕಾ ಬಾತ್'' ಈಚೆಗೆ ನಿಂತು ಹೋಗಿದೆಯಂತೆ. ಹೋಂ ವರ್ಕು ಇಲ್ಲಿ ತೋರುವುದಿಲ್ಲ. ಅಲ್ಲಿ ವೇದಿಕೆ ಮೇಲೆ ಬರುವ ಗಣ್ಯರ ಆಪ್ತರು ಯಾರು ಎಂದೇ ಗಣ್ಯರಿಗೇ ತಿಳಿದಿರುವುದಿಲ್ಲ. ಕೆಲವು ಬಾರಿ ಅದೆಷ್ಟೋ ವರ್ಷ ಹಿಂದಿನ ಸಹಪಾಠಿಗಳು, ಸಹೋದ್ಯೋಗಿಗಳು, ನೆರೆ ಮನೆಯವರು... ಅಲ್ಲಿ ಮುಖ ತೋರಿಸಿ ಗಣ್ಯರನ್ನು ಬೆಚ್ಚಿ ಬೀಳಿಸುತ್ತಾರೆ. ಕೆಲವೊಮ್ಮೆ ಗಣ್ಯರು ಅಂಥಹವರ ಹೆಸರನ್ನು ನೆನಪಿಸಿಕೊಳ್ಳಲು ತಿಣುಕುವುದೂ ಉಂಟು. ಅದು ಸ್ಟೇಜ್ ಮೇನೇಜ್ ಮಾಡಿರುವ ಶೋ ಆಗಿದೆಯೇ ಎನ್ನುವ ಅನುಮಾನವೂ ನುಸುಳದು - ಹಾಗೆ ಅಲ್ಲಿನ ಶೋ ಬಿಂಬಿತವಾಗುತ್ತದೆ.

ಆದರೂ ಎಷ್ಟೋ ಬಾರಿ ತೆರೆ ಮರೆಯಲ್ಲಿರುವವರು ನಮ್ಮ ಕಣ್ಣಿಗೇ ಬೀಳದಿರುವಾಗ ಮತ್ತು ಅಂತಹವರು ಯಾರ ಗಮನಕ್ಕೂ ಬೀಳದೇ ಕಾಡು ಹೂಗಳ ಹಾಗೆ ಇರುವಾಗ ಪ್ರತಿಭೆಗಳನ್ನು ಹೇಗಾದರೂ ಹೆಕ್ಕಿ ಪರಿಚಯಿಸುವುದು ಅತಿ ಮುಖ್ಯ.

ಈ ಟೀವಿ ಚಾನಲ್ಲು ಈ ಕೆಲಸವನ್ನು ಚೆನ್ನಾಗಿ ನಡೆಸಿಕೊಂಡು ಬರುತ್ತಿದೆ. ಕೊಂಚ ವೃತ್ತಿ ಕೌಶಲ್ಯವನ್ನೂ ಬೆಳೆಸಿಕೊಂಡರೆ ಕಾರ್ಯಕ್ರಮ ಲವಲವಿಕೆಯಿಂದ ಕೂಡಿರುವದಲ್ಲದೇ ಮತ್ತೂ ಜನಾಕರ್ಷಣೆಯನ್ನೂ ಪಡೆಯಬಹುದು. ಆಟೋಗ್ರಾಫ್ ಕಾರ್ಯಕ್ರಮ ಉತ್ತಮಗೊಳ್ಳಲು ಹಲವಾರು ಯೋಜನೆಗಳನ್ನು ರೂಪಿಸಿಕೊಳ್ಳಬಹುದು ಮತ್ತು ಅದಕ್ಕೆ ಪೂರ್ವ ಪ್ರಚಾರವನ್ನೂ ನೀಡಿ ಹೆಚ್ಚೆಚ್ಚು ವೀಕ್ಷಕರ ಗಮನ ಸೆಳೆಯುವಂತೆ ಮಾಡಬಹುದು. ಒಟ್ಟಿನಲ್ಲಿ ಕಾರ್ಯಕ್ರಮ ಕೆಲವು ನೆಗಟೀವ್ ಅಂಶಗಳನ್ನು ಹೊರತುಪಡಿಸಿ ಮೆಚ್ಚುಗೆ ಗಳಿಸುವಂತಿದೆ.

## ಧನ್ಯವಾದಗಳು

**ತನ್ನ ಕರೆಗೆ ಓಗೊಟ್ಟು ಅನೇಕ ಚಂದಾದಾರರು ತಮ್ಮ ಹತ್ತು ವರ್ಷದ ಚಂದಾ ನವೀಕರಿಸಿರುವುದನ್ನು ಅಪರಂಜಿ ಕೃತಜ್ಞತೆಯಿಂದ ನೆನೆಯುತ್ತಾಳೆ. ಚಂದಾ ನವೀಕರಿಸಿದ ಎಲ್ಲರಿಗೂ ಧನ್ಯವಾದಗಳು. ಇನ್ನುಳಿದ ಅನೇಕ ಚಂದಾದಾರರೂ ಇದೇ ದಾರಿಯಲ್ಲಿ ಸಾಗಿ ಅಪರಂಜಿಯನ್ನು ಸುಭದ್ರಗೊಳಿಸುತ್ತಾರೆಂಬ ಆಶಯ ನಮ್ಮದು.**

**- ಬೇಲೂರು ರಾಮಮೂರ್ತಿ**

ಉಪ ಸಂಪಾದಕರು

# ಮಕ್ಕಳೇ ದೊಡ್ಡವರು!

- ಎಚ್. ಗೋಪಾಲಕೃಷ್ಣ

ಅದೊಂದು ಮಾಧ್ವ ಸಂಪ್ರದಾಯದ ಮನೆ. ಮಾಧ್ವ ಸಂಪ್ರದಾಯ ಅಂದರೆ ಸಾಕು ಮಡಿ ಕಟ್ಟುನಿಟ್ಟು ಎಲ್ಲವೂ ಅತಿ ಎನ್ನುವಷ್ಟು ಹೆಚ್ಚು. ಅದರಲ್ಲೂ ಯಾವುದಾದರೂ ಹಬ್ಬ ಹರಿದಿನವಾದರಂತೂ ಮನೆಯಲ್ಲಿರುವ ಹಿರಿಯರು ಮಾಡುವ ಅವಾಂತರ ಕಣ್ಣಿನಲ್ಲಿ ನೀರು ತರಿಸುವ ಹಾಗೆ ಭಯಂಕರ! ಒಮ್ಮೆ ನಾವು ಚಿಕ್ಕವರಿದ್ದಾಗ ಇಂಥಹ ಒಂದು ಭಯಂಕರ ಪರಿಸ್ಥಿತಿಗೆ ಎದುರಾಗುವ ಪ್ರಸಂಗ ಬಂದಿತ್ತು. ಈಗ ಅದರ ವಿವರಣೆ.

ಅವತ್ತು ನಮ್ಮ ಮನೆಯಲ್ಲಿ ನಮ್ಮ ಅಜ್ಜಿಯ ತಿಥಿ. ತಿಥಿ ಅಂದರೆ ಬ್ರಾಹ್ಮಣರು ಬರಬೇಕು, ಸಾಂಗೋಪಾಂಗವಾಗಿ ಶ್ರಾದ್ಧದ ಕಾರ್ಯಕ್ರಮಗಳು ಸರಿಸುಮಾರು ಸಂಜೆ ನಾಲ್ಕರವರೆಗೆ ನಡೆಯಬೇಕು. ಬ್ರಾಹ್ಮಣರ ಊಟವಾದ ನಂತರ ಮನೆಯವರು ಊಟಕ್ಕೆ ಕೂಡಬೇಕು - ಇದು ನಮ್ಮ ಹಿರಿಯರು ಅನೂಚಾನವಾಗಿ ಲಾಗಾಯ್ತಿನಿಂದಲೂ ಪರಿಪಾಲಿಸಿಕೊಂಡು ಬಂದಿದ್ದ ಸಂಪ್ರದಾಯ. ನಮ್ಮ ತಾತನಿಗೆ ಅಜ್ಜಿ ಅತ್ಯಂತ ಆಪ್ತರಾಗಿದ್ದವರು ಮತ್ತು ತಿಥಿಯನ್ನ ಮನೆಯಲ್ಲೇ ಮಾಡುವ ಸಂಪ್ರದಾಯವನ್ನೂ ಅವರು ರೂಢಿಸಿಕೊಂಡುಬಿಟ್ಟಿದ್ದರು. ಮಾಮೂಲಿನ ಹಾಗೆ ಅಂದು ಶಾಲೆಯಿರದೇ ರಜವೂ ಇದ್ದುದರಿಂದ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು - ಹೀಗೆ ಎಲ್ಲರೂ ಮನೆಯಲ್ಲಿಯೇ ಈ ತಿಥಿಯನ್ನು ''ಅನುಭವಿ''ಸುತ್ತಾ ಮನೆಯ ಆಚೆ ಕೂತಿದ್ದೆವು. ಹನ್ನೆರಡರ ಸುಮಾರಿಗೆ ಬರಬೇಕಿದ್ದ ಬ್ರಾಹ್ಮಣರು ಅವತ್ತು ಬಂದಿದ್ದು ಒಂದು ಗಂಟೆ ತಡವಾಗಿ. ಅವರು ಬಂದ ನಂತರ ಅವರ ಸ್ನಾನ, ಮನೆ ದೇವರ ಪೂಜೆ ಇತ್ಯಾದಿಗಳು ನಡೆದು ತಿಥಿ ಕಾರ್ಯಕ್ರಮ ಶುರುವಾದಾಗ ಎರಡು ಗಂಟೆಯನ್ನೂ ಮೀರಿತು.

ಬೆಳಿಗ್ಗೆಯಿಂದ ಹೊಟ್ಟೆಗೇನೂ ಬೀಳದೇ - ನಾವು ಚಿಕ್ಕವರು - ಈ ತಿಥಿಯನ್ನು ಯಾಕಾದರೂ ಮಾಡುತ್ತಾರೋ ಎಂಬ ಸ್ಥಿತಿಗೆ ಬಂದುಬಿಟ್ಟಿದ್ದೆವು. ನಾವು ದೊಡ್ಡವರಾದ ಮೇಲೆ ಈ ತಿಥಿಗಳನ್ನು ಮಾಡಲು ಸುಲಭವಾದ ದಾರಿಯೊಂದನ್ನು ಹುಡುಕುವ ಯೋಚನೆಯನ್ನೂ ಮಾಡುತ್ತಿದ್ದೆವು. ತಿಥಿಯ ಕಾರ್ಯ ಆರಂಭವಾಯಿತು. ಹೊಗೆಯಲ್ಲಿ ಕೂತ ಅಜ್ಜ ಬ್ರಾಹ್ಮಣರು ಹೇಳಿದ ಹಾಗೆ ಮಂತ್ರ ಹೇಳುತ್ತಾ ಅವರು ಸವ್ಯ ಎಂದಾಗ ಜನಿವಾರವನ್ನು ಬಲಗಡೆಗೂ ಅಪಸವ್ಯ ಎಂದಾಗ ಜನಿವಾರವನ್ನು ಎಡಗಡೆಗೂ ಬದಲಾಯಿಸುತ್ತಾ ಇದ್ದುದು ನಮಗೆ ಹೊರಗಿನಿಂದಲೇ ಕಾಣಿಸುತ್ತಿತ್ತು. ಪಿಂಡ ಪ್ರಧಾನ ಕ್ರಿಯೆ ಆರಂಭವಾದಾಗ ಆಗಲೇ ಮಾಡಿ ಇರಿಸಿದ್ದ ಪುಟ್ಟ ಅನ್ನದ ತಪ್ಪಲೆಯಿಂದ ತಾತ ಅನ್ನ ತೆಗೆದು ಅದನ್ನು ಮೂರು ದೊಡ್ಡ ಉಂಡೆ ಒಂದು ಚಿಕ್ಕ ಉಂಡೆಯನ್ನಾಗಿಯೂ ಕಟ್ಟಿ ಅದರ ಪೂಜೆ ಮುಗಿದು ಕೊನೆ ಹಂತವಾಗಿ ಮನೆಯವರೆಲ್ಲರೂ ಬಂದು ಅದಕ್ಕೆ ನಮಸ್ಕಾರ ಮಾಡಿಯೂ ಆಯಿತು.

ಈ ಅನ್ನದ ಉಂಡೆಗಳನ್ನು ಒಂದು ಹಿತ್ತಾಳೆಯ ದೊಡ್ಡ ತಟ್ಟೆಯಲ್ಲಿ ಇರಿಸಿಕೊಂಡು ತಲೆಯ ಮೇಲೆ ಹೊತ್ತು ತಾತ ಹೊರಬಂದರು. ಪಿತೃಗಳಿಗೆ ಅದು ತಲುಪಬೇಕಾದರೆ ಯಾವುದಾದರೂ ಹಸು ಅದನ್ನು ತಿನ್ನಬೇಕು. ಇದಕ್ಕಾಗಿ ಒಂದು ಹಸುವನ್ನೂ ರೆಡಿ ಮಾಡಿಯಾಗಿತ್ತು.

ಹಸುವಿಗೆ ಪಿಂಡಗಳನ್ನು ಇರಿಸಿ ತಾತ ಬರುವಾಗ್ಗೆ ಮೊಮ್ಮಗು ತಾತನ ಎದುರು ಬಂದಿತು. ''ತಾತಾ, ಆಯಿತಾ ತಿಥಿ? ನಾವು ಏನಾದರೂ ತಿನ್ನಬಹುದಾ? ತುಂಬಾ ಹಸಿವು...'' ಅಂತ ಮೊಮ್ಮಗು ನಾವು ಹೇಳಿಕೊಟ್ಟಿದ್ದ ಪಾಠವನ್ನು ತಾತನಿಗೆ ಒಪ್ಪಿಸಿತು. ತಾತ ಒಂದು ಕ್ಷಣ ಮಗುವಿನ ಬಾಡಿದ ಮುಖವನ್ನು ನೋಡಿದರು, ನಂತರ ನಮ್ಮ ಮುಖಗಳನ್ನೂ ನೋಡಿದರು. ಅದೇನು ಅನಿಸಿತೋ ನೇರ ಅಡಿಗೆ ಮನೆಗೆ ನಡೆದರು. ಒಂದು ತಟ್ಟೆಯ ತುಂಬಾ ಅಂದಿನ ವಿಶೇಷ ಭಕ್ಷ್ಯಗಳನ್ನು ತುಂಬಿ ಆಚೆ ತಂದರು.

''ಇದನ್ನು ತಿನ್ತಾ ಇರಿ... ಇನ್ನೇನು ಬ್ರಾಹ್ಮಣರ ಊಟ ಆಗಿಬಿಡುತ್ತೆ...'' ಅಂತ ತಟ್ಟೆಯನ್ನು ನಮ್ಮ ಮುಂದೆ ದೂರದಿಂದಲೇ ಮಡಿಯಲ್ಲಿ ಇಟ್ಟರು. ಆವಾಗಲೇ ಊಟಕ್ಕೆ ಬಂದಿದ್ದ ಬ್ರಾಹ್ಮಣರು ಕಾಲುಕೈ ತೊಳೆಯಲು ಆಚೆ ಬರಬೇಕೇ?

''ನರಸಿಂಗ ಇದೇನು ಮಾಡ್ತಿದ್ದೀ? ಇನ್ನೂ ಬ್ರಾಹ್ಮಣರ ಊಟ ಆಗಿಲ್ಲ ಅದಕ್ಕೆ ಮೊದಲೇ...''

ತಾತ ಒಂದು ಸೆಕೆಂಡು ಅವರನ್ನ ದಿಟ್ಟಿಸಿ ನೋಡಿದರು. ''ನೋಡಿ ಸ್ವಾಮೀ ಇವತ್ತು ನನ್ನ ಹೆಂಡತಿ-ಮಕ್ಕಳ ಅಜ್ಜಿ- ತಿಥಿ ಆಗಿರೋದೂ. ಅವಳು ಬದುಕಿರೋವರೆಗೂ ಅದೇನು ಖಾಹಿಲೆ ಕಸಾಲೆ ಇದ್ದರೂ ಮಕ್ಕಳನ್ನ ಒಂದು ನಿಮಿಷ ಹಸಿದುಕೊಂಡು ಇರೋದಿಕ್ಕೆ ಬಿಡ್ತಾ ಇರಲಿಲ್ಲ. ಇವತ್ತು ನೀವು ತಡವಾಗಿ ಬಂದಿರಿ. ಅದರಿಂದ ಎಲ್ಲವೂ ತಡ ಆಗಿಬಿಟ್ಟಿತು. ಇವತ್ತು ನನ್ನ ಹೆಂಡತಿ - ಅದೇ ಮಕ್ಕಳ ಅಜ್ಜಿ ಬದುಕಿದ್ದರೆ ಮಕ್ಕಳು ಹೀಗೆ ಉಪವಾಸ ಇರೋದಿಕ್ಕೆ ಖಂಡಿತಾ ಬಿಡ್ತಾ ಇರಲಿಲ್ಲ. ಅದೂ ಅಲ್ಲದೇ ತಿಥಿ ಮಾಡ್ತಿರೋದು ಅವಳಿಗೋಸ್ಕರ - ತಿಥಿ ದಿವಸ ತನ್ನ ಮೊಮ್ಮಕ್ಕಳು ಉಪವಾಸ ಇದ್ದರು ಅಂತ ಅವಳ ಆತ್ಮ ಪರಿತಪಿಸಬಾರದು...''

ಅಂತ ತಾತ ವಿವರಣೆ ಕೊಡಲು ಶುರು ಮಾಡಿದರು. ಬ್ರಾಹ್ಮಣರಲ್ಲಿ ಒಬ್ಬರು ''ಅಡಿಗೆ ಮೈಲಿಗೆಯಾಯಿತು....'' ಅಂತ ಗೊಣಗಲು ಆರಂಭಿಸಿದರು.

ನರಸಿಂಹ ದೇವರು ನಮ್ಮ ಮನೆ ದೇವರಂತೆ. ತಾತನ ನರಸಿಂಹ ಅವತಾರವನ್ನು ನಾವು ಅವತ್ತು ನೋಡಿದೆವು. ಇದುವರೆಗೂ ಪಾದ ಪೂಜೆ ಮಾಡಿಸಿಕೊಂಡಿದ್ದವರು ತಲೆ ಮೇಲಕ್ಕೆ ಎತ್ತದ ಹಾಗೆ ತಾತ ಅವತ್ತು ಹೇಗೆ ಬೈದರು ಅಂದರೆ...! ಇನ್ನೂ ಕೆಲವು ಅರ್ಥ ತಿಳಿಯದ ಪದಗಳು ನನ್ನ ತಲೆಯಲ್ಲಿ ಮೂವತ್ತು ವರ್ಷಗಳ ನಂತರವೂ ಕೂತಿದೆ!

''ನೋಡೀ ಇವತ್ತು ನಿಮಗೆ ಇಲ್ಲಿ ಅಡಿಗೆ ಮೈಲಿಗೆ ಆಯಿತು ಅನ್ನಿಸಿದರೆ ಊಟ ಮಾಡಬೇಡಿ - ಹಾಗೇ ಹೋಗಿ. ನನಗೆ ಹಸಿದಿರೋ ಮಕ್ಕಳೇ ನಿಮಗಿಂತಲೂ ಮುಖ್ಯ..... ಹಸಿವಿನಿಂದ ಅವು ಒದ್ದಾಡ್ತಾ ಇದ್ದರೆ ಸತ್ತು ಸ್ವರ್ಗದಲ್ಲಿರೋ ಅವುಗಳ ಅಜ್ಜಿ

ಆತ್ಮಕ್ಕೂ ಶಾಂತಿ ಸಿಗದು... ಈಗ ನೀವು ಊಟ ಬಿಟ್ಟು ಹೊರಟರೆ ಮುಂದಿನ ವರ್ಷದಿಂದ ನಾನು ತಿಥಿ ಮಾಡೋದನ್ನೇ ನಿಲ್ಲಿಸಿಬಿಡ್ತೀನಿ. ಅದರ ಪಾಪ ನನಗಲ್ಲ ಸುತ್ಕೊಳ್ಳೋದೂ - ನಿಮಗೆ. ರೌರವ ನರಕದಲ್ಲಿ ಬಿದ್ದು ವಿಲವಿಲ ಒದ್ದಾಡ್ತೀರೀ ನೀವು....''

ಬ್ರಾಹ್ಮಣರು ಎರಡನೇ ಮಾತಿಲ್ಲದೇ ಒಳಗೆ ನಡೆದರು ಮತ್ತು ಊಟವನ್ನೂ ಮಾಡಿದರು!

ಒಂದೆರಡು ವರ್ಷದಲ್ಲಿಯೇ ನಮ್ಮ ತಾತ ವೈಕುಂಠ ಸೇರಿದರು. ತಾತನ ಮಾದರಿಯನ್ನೇ ನಾವೂ ಪಾಲಿಸುತ್ತಾ ಇದೀವಿ - ಹಸಿದಿರೋ ಮಕ್ಕಳಿಗೆ ನಾವೂ ಸೇರಿದ ಹಾಗೆ ಮೊದಲು ಹಸಿವು ಇಂಗಿಸುತ್ತೇವೆ!




ಅವನ ಕಾಲನ್ನು ಉಳಿಸುಕ್ಕೆ ಆಯ್ತು ಅನ್ನೋದೇ ಸಂತೋಷದ ಸುದ್ದಿ

# ವಿದ್ಯಮಾನಗಳು

- ಕು.ಶ.

ಹೋಲ್ಕರ್ ರಾಜಮನೆತನದ ಬಗೆಗೆ ಓದಿದ್ದೆವು, ಕ್ರಿಕೆಟಿಗ ಸೋಲ್ಕರ್ ಬಗೆಗೆ ಕೇಳಿದ್ದೆವು. ಈಗ ಅದು ಯಾವುದೋ ವೋಲ್ಕರ್ ಮಹಾಶಯ ತಿಂಗಳು ಪೂರ್ತಿ ನಮ್ಮ ಪತ್ರಿಕೆಗಳ ಮುಖಪುಟಗಳನ್ನು ಆಕ್ರಮಿಸಿಕೊಂಡಿದ್ದಾನೆ. ಇವನ ವರದಿಯಲ್ಲಿನ non-contractual beneficiaries - ಲೆಕ್ಕದಲ್ಲಿಲ್ಲ ಆದರೆ ತಿಜೋರಿಲಿದೆ, ಎನ್ನುವವರ ಪಟ್ಟಿಯಲ್ಲಿ ಕಾಂಗ್ರೆಸ್ ಪಕ್ಷ ಮತ್ತು ನಟವರ್ ಸಿಂಗ್ - ಎರಡು ಹೆಸರುಗಳಿವೆ ಎಂದು ನೀವು ಓದಿದ್ದೀರಿ. ಈಗ ನೋಡಿ ಇನ್ನೆಷ್ಟು ಹೆಸರುಗಳು ಉದುರುತ್ತಿವೆ: ಮಂತ್ರಿಯ ಮಗ, ಅವನ ದೂರದ ಸಂಬಂಧಿ, ಅವನ ಸ್ನೇಹಿತ, ಆತನ ಅಪ್ಪ. ನಮ್ಮ ಮಹಾಕವಿ ಹೇಳಿರುವ ವೇದ ಪುರುಷನ ಸುತನ ತಳೋದರಿಯ ಹೆಮ್ಮಗನ ಇತ್ಯಾದಿ ಸಂಬಂಧಗಳಿಗಿಂತ ಸಂಕೀರ್ಣ ಸರಪಳಿ.

ವೋಲ್ಕರ್ ಅನ್ನಕ್ಕಾಗಿ ಎಣ್ಣೆ ಯೋಜನೆಯ ಲಾಭ ಪಡೆದವರ ಪಟ್ಟಿ ಕೊಟ್ಟಿದ್ದಾನೆ, ಸರಿ. ನಮ್ಮ ದೇಶದಲ್ಲಿ ಈ ವೋಲ್ಕರ್ ವರದಿಯಿಂದ ಲಾಭ ಪಡೆದವರ ಪಟ್ಟಿ ನಾವು ಮಾಡಬಹುದು. ಮೊದಲು ಬಿಜೆಪಿ, ಆಮೇಲೆ ಅದರ ನಾಯಕ ಅರುಣ್ ಜೈಟ್ಲಿ, ಮಂತ್ರಿ ಖಾತೆ ಕಳೆದುಕೊಂಡಿದ್ದಕ್ಕೆ ಖುಷಿಪಡುತ್ತಿರುವ ಕಾಂಗ್ರೆಸ್ ಜನ, ಎಲ್ಲಾ ಟೀವಿ ಸುದ್ದಿ ಚಾನಲುಗಳು, ಎಲ್ಲಾ ಪತ್ರಿಕೆಗಳು, ವಿವೃತ್ತ ನ್ಯಾಯಾಧೀಶರು, ನಿವೃತ್ತ ಯೂಎನ್ ಅಧಿಕಾರಿ, ಪ್ರಪಂಚ ಪ್ರದಕ್ಷಿಣೆ ಮಾಡಲು ಅವಕಾಶ ಸಿಕ್ಕ ಸಿಬ್ಬಂದಿವರ್ಗ ಇತ್ಯಾದಿ ಇತ್ಯಾದಿ. ಪಟ್ಟಿ ಹನುಮಂತನ ಬಾಲದ ಹಾಗೆ ಬೆಳೆಯುತ್ತೆ. ಆದರೂ ಈ ಪಟ್ಟಿಯಲ್ಲಿನ ಕೊನೆಯ ಹೆಸರನ್ನು ಈಗಲೇ ಊಹಿಸಬಹುದು: ವಿಚಾರಣಾ ಆಯೋಗಗಳು ಕೊಡುವ ವರದಿಗಳನ್ನು ಭದ್ರವಾಗಿ ಮುಚ್ಚಿಡಲು ಬೇಕಾಗುವ ಮಜಬೂತಾದ ಕಬ್ಬಿಣದ ಕಪಾಟುಗಳನ್ನು ಸರ್ಕಾರಕ್ಕೆ ಸರಬರಾಜುಮಾಡಿದ ಅಂಗಡಿ!

★★★★★

ರಾಜೀವ ಗಾಂಧಿ ಪ್ರಧಾನಿಯಾದ ತಮ್ಮ ಮೊದಲ ವರ್ಷದಲ್ಲಿಯೇ ಒಟ್ಟು 24 ಬಾರಿ ತಮ್ಮ ಮಂತ್ರಿಮಂಡಲದಲ್ಲಿ ಬದಲಾವಣೆ ಮಾಡಿದ್ದರಂತೆ. ಈಗ ನೋಡಿ ನಮ್ಮ ಎಂಎಂ ಸಿಂಗ್ ಒಂದೂವರೆ ವರ್ಷದಲ್ಲಿ ಎರಡನೆಯ ಬದಲಾವಣೆಗೆ ಎಷ್ಟು ತಿಣುಕುತ್ತಿದ್ದಾರೆ. ಪಾಪ ಅವರ ಕಷ್ಟ ಬಹುಸಂಖ್ಯೆಯ ಸ್ನೇಹಪಕ್ಷಗಳು. ಇದನ್ನೇ ಏನೋ ಇಂತಹ ಸ್ನೇಹಿತರಿರುವಾಗ ವೈರಿಗಳೇಕೆ ಎಂದು ಹೇಳುವುದು.

★★★★★

ಹಿಂದೆ ಒಂದು ಪಕ್ಷ ಚುನಾವಣೆಯಲ್ಲಿ ಸೋತು ಇನ್ನೊಂದು ಪಕ್ಷ ಅಧಿಕಾರಕ್ಕೆ ಬಂದಾಗ ಹೊಸ ಸರ್ಕಾರದ ಮಂತ್ರಿಗಳು ಜನರ ಎಲ್ಲಾ ಕಷ್ಟಗಳಿಗೂ ಹಿಂದಿನ ಸರ್ಕಾರವೇ ಕಾರಣ ಎಂದು ಹೇಳುತ್ತಾ ಒಂದು ವರ್ಷ ನೂಕುತ್ತಿದ್ದರು. ನಮ್ಮ ರಾಜ್ಯದ

ಇಂದಿನ ಸಮ್ಮಿಶ್ರ ಸರ್ಕಾರದ ಮಂದಿ ಬಹು ಜಾಣರು. ಹಿಂದಿನ ಸರ್ಕಾರವನ್ನು ಬೈಯುತ್ತಾ ಒಂದೂವರೆ ವರ್ಷ ಕಳೆದಮೇಲೆ ತಮ್ಮ ಪಕ್ಷಕ್ಕೇ ಸೇರಿದ್ದ ಒಬ್ಬ ಮಂತ್ರಿಯನ್ನು ಬೈಯುತ್ತಾ ಇನ್ನೊಂದು ವರ್ಷ ಕಳೆಯುವ ಹುನ್ನಾರದಲ್ಲಿದ್ದಾರೆ. ಹೀಗೆ ಮೂರೋ ಬಾರಿ ತಮ್ಮದೇ ಮಂತ್ರಿಗಳನ್ನು ಬದಲಾಯಿಸಿದರೆ ಬೈಗುಳದ ಆಟದಲ್ಲೇ ಐದು ವರ್ಷ ಮುಗಿಸಬಹುದು, ಎಂತಹ ಬುದ್ಧಿವಂತಿಕೆ!

★★★★★

ನಮ್ಮ ಮಾಧ್ಯಮಗಳು ಲೋಕಾಯುಕ್ತ ಜಸ್ಟಿಸ್ ವೆಂಕಟಾಚಲ ಅವರಿಗೆ ಆಪದ್ಭಾಂಧವ ಬಿರುದು ಕೊಡಲೇಬೇಕು. ನೋಡಿ ಲೋಕಾಯುಕ್ತರ ಕೃಪೆಯಿಂದ ಈಗ ಎಂತಹ ಸುದ್ದಿ ಸಮೃದ್ಧಿ. ಅಲ್ಲಿ ಇಲ್ಲಿ ಎಲ್ಲೆಲ್ಲೂ ದಾಳಿಗಳು, ಕಂತೆಕಂತೆ ನೋಟುಗಳೊಡನೆ ಸಿಕ್ಕಿಕೊಳ್ಳುವ ಚಿಕ್ಕ ದೊಡ್ಡ ಅಧಿಕಾರಿಗಳು; ಅವರುಗಳ ಮನೆಗಳಲ್ಲಿ ಸಿಗುವ ಧನಕನಕ ವಸ್ತು ವಾಹನಗಳು. ಜೊತೆಗೆ ಲಭ್ಯವಾಗುವ ದುಬಾರಿ ಸೈಟುಗಳು, ಅರಮನೆಯಂತಹ ಮನೆಗಳ ವಿವರಗಳು. ಬರೀ ವರದಿಗಾರರಿಗಷ್ಟೇ ಅಲ್ಲ ಪತ್ರಿಕಾ ಛಾಯಾಗ್ರಾಹಕರಿಗಳಿಗೂ ಸುಗ್ಗಿಯೋ ಸುಗ್ಗಿ.

ಆದರೆ ಒಂದು ದೊಡ್ಡ ಕೊರತೆ- ಮೊದಲ ಪುಟದಲ್ಲಿ ಫೋಟೋಗ್ರಾಫಿಕ್ ಎವಿಡೆನ್ಸ್ ಸಮೇತ ಭ್ರಷ್ಟ ಅಧಿಕಾರಿಗಳ ಬಗೆಗೆ ಅಷ್ಟು ದಿನದಿಂದ ಓದುತ್ತಿದ್ದೇವೆ. ಆದರೆ ಇವರಲ್ಲಿ ಒಬ್ಬರಿಗಾದರೂ ಜೈಲು ಶಿಕ್ಷೆ ಅಥವಾ ಕೆಲಸದಲ್ಲಿ ಹಿಂಬಡ್ತಿಯಾದ ಒಂದೇ ಒಂದು ಸುದ್ದಿಯನ್ನು ಇಲ್ಲಿಯವೆಗೂ ಓದಲಾಗಿಲ್ಲ. ಪಾಪ ಲೋಕಾಯುಕ್ತರು ಕರ್ಮಣ್ಯೇವ ಅಧಿಕಾರಸ್ತು ಎಂದು ನಂಬಿ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಭ್ರಷ್ಟರನ್ನು ಶಿಕ್ಷಿಸಬೇಕಾದರು ತುಂಬಾ ಬ್ಯುಸಿ, ತಮ್ಮ ಕುರ್ಚಿಗಳನ್ನು ಉಳಿಸಿಕೊಳ್ಳುವ ಮಹತ್ಕಾರ್ಯದಲ್ಲಿ!

ಭ್ರಷ್ಟಾಚಾರದ ಸುದ್ದಿಗಳಿಂದ ಇನ್ನೊಂದು ಪರಿಣಾಮವಾದ ಒಂದು ಕತೆ ಒಬ್ಬ ಸ್ನೇಹಿತರು ಹೇಳಿದರು. ಅವರ ಸೋದರಳಿಯ ಒಂದು ಫಲವತ್ತಾದ ಇಲಾಖೆಯಲ್ಲಿದ್ದಾನಂತೆ. ಅವನ ಕಚೇರಿಯಲ್ಲಿ ಎಲ್ಲವೂ ಕ್ರಮಬದ್ಧ, ಇವನ ಪರ್ಸೆಂಟೇಜ್ ಮನೆಗೇ ಬಂದುಬೀಳುತ್ತೆ. ದೊಡ್ಡ ಮನೆ ಕಟ್ಟಿಸಿದಾನೆ, ಮಕ್ಕಳು ಒಳ್ಳೆ ಸ್ಕೂಲುಗಳಲ್ಲಿ ಓದುತಿದಾರೆ. ಮಗನ ಇಂಜಿನಿರೀಂಗ್ ಕಾಲೇಜ್ ಡೊನೇಷನ್ ಮಗಳ ವರದಕ್ಷಿಣೆಗೆ ಈಗಾಗಲೇ ಎಲ್ಲಾ ಏರ್ಪಾಡಾಗಿದೆ. ಇಷ್ಟುದಿನ ಎಲ್ಲಾ ಚೆನ್ನಾಗಿತ್ತು. ಆದರೆ ಈಗ ಟೀವೀಲಿ ಯಾರಯಾರ ಮನೆಗಳಲ್ಲೋ ಸಿಗುತ್ತಿರುವ ಬೆಳ್ಳಿ ಚೆಂಬುಗಳು, ಚಿನ್ನದ ಸರಗಳು, ವಜ್ರದ ನೆಕ್‌ಲೆಸ್‌ಗಳನ್ನು ನೋಡಿ ಅವನ ಹೆಂಡತಿಗೆ ಗಂಡನ ಮೇಲೆ ಕೋಪವಂತೆ. ನಿಮಗಿಂತ ಕೆಳಗಿನ ಗ್ರೇಡುಗಳಿಲ್ಲಿರುವವರು ತಮ್ಮ ಹೆಂಡತಿಯರನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ನೀವು ಇದೀರಿ ನಾಲಾಯಕ್ಕು ಎಂದು ಗಂಡನ ಮುಖ ತಿವಿಯುತ್ತಿದ್ದಾಳಂತೆ. ಮೊನ್ನೆ ನೋಡಿದ ತರಹದ ವಜ್ರದ ನೆಕ್‌ಲೆಸ್ ಮೂರು ತಿಂಗಳಿನಲ್ಲಿ ಮಾಡಿಸಿಕೊಡಲೇಬೇಕು ಎಂದು ಅಲ್ಟಿಮೇಟಂ ಕೊಟ್ಟಿದ್ದಾಳಂತೆ.

★★★★★

# ನಕ್ಸಲರೂ ಪೂಜಾರಿಗಳೂ..

- ಸೂರಿ ಹಾರ್ದಳ್ಳಿ

ನಾನು ಕಾಶೀಪತಿಯ ಮನೆಯೊಳಗೆ ಕಾಲಿಡುವಾಗ ಕಂಡ ದೃಶ್ಯ ಭಯಂಕರವಾಗಿತ್ತು. ಮಾದೇವಿ ಪೊರಕೆಯೊಂದನ್ನು ಎತ್ತಿ ಹಿಡಿದು ಒನಕೆ ಓಬವ್ವಳ ಭಂಗಿಯಲ್ಲಿ ನಿಂತಿದ್ದಳು. ಎತ್ತಿ ಹಿಡಿದ ಪೊರಕೆಯ ಕೆಳಗೆ ಹಳೆಯ ಪತ್ರಿಕೆಗಳನ್ನು ಹರಡಿಕೊಂಡು ಕಾಶೀಪತಿ ಕುಳಿತಿದ್ದ. ಮಾದೇವಿ ಗಂಡನನ್ನು ಹೊಡೆಯುತ್ತಾಳೆ ಎಂಬುದು ನಿಮಗೆಲ್ಲರಿಗೂ ಗೊತ್ತಿರುವ ವಿಷಯ. ಅವಳು ದಿನಾ ಒಂದೇ ಥರ ಹೊಡೆದು, ಹೊಡೆಸಿಕೊಂಡು ಬೇಸರವಾಗಿ ಇವತ್ತು ಹೊಸ ಸಂಶೋಧನೆ ಮಾಡಿರಬಹುದು, ಅದಕ್ಕಾಗಿ ನವೀನ ಭಂಗಿಯಲ್ಲಿ ನಿಂತಿರಬಹುದು ಎಂದು ಆ ಕ್ಷಣ ಊಹಿಸಿದೆ: ನಿಮ್ಮ ಹಾಗೆ.

ಆದರೆ ಅದು ಸುಳ್ಳು. ಹಳೆಯ ಪತ್ರಿಕೆಗಳ ಅಡಿಯಿಂದ, ಜೀವವನ್ನು ಕೈಲಿ ಹಿಡಿದುಕೊಂಡು, ಭೂಕಂಪದಿಂದ ಮನೆ-ಮಠ ಕಳೆದುಕೊಂಡ ನಿರಾಶ್ರಿತರಂತೆ, ಸುನಾಮಿಯ ಅಲೆ ಕಾಣುತ್ತಲೇ ಪ್ರಾಣಭಯದಿಂದ ಓಡಿಬರುವ ಯಃಕಶ್ಚಿತ್ ಜೀವವನ್ನು ಉಳಿಸಿಕೊಳ್ಳಬಯಸುವ ರಣಹೇಡಿಗಳಂತೆ ಪತ್ರಿಕೆಗಳ ಕೆಳಗಿನಿಂದ ಜಿರಲೆಗಳು ಓಡಿಬರುತ್ತಿದ್ದವು. ವೀರಾವೇಶದಿಂದ ಮಾದೇವಿ ಅವನ್ನು ಹೊಡೆಯುತ್ತಿದ್ದಳು. ಹೊಡೆಯುವ ರಭಸದಲ್ಲಿ ಅವಳ ಸೆರಗು ಜಾರುತ್ತಿತ್ತು: ಇವಿಷ್ಟು ಅಂದಿನ ಚಿತ್ರಣ.

ಕಾಶಿ ನನ್ನತ್ತ ತಿರುಗಿ ಎಂದ, ಬಾರೋ.. ಕೂತುಕೋ, ಎಂದ. ಅಂದರೆ ಅವನು ಪ್ರಸನ್ನನಾಗಿದ್ದಾನೆ: ಅಂದರೆ ಅವನಾಕೆ ಎಂದಿನಂತೆ ಬೆಳಿಗ್ಗೆಯೇ ಬೈಗುಳದ ಸಮಾರಾಧನೆ ನಡೆಸಿದ್ದಾಳೆ.

ನಾನು ಜಿರಲೆಗಳ ಬಗ್ಗೆ ದೊಡ್ಡದಾಗಿ ಸಂಶೋಧನೆ ಮಾಡಿದ್ದೆ. ಸಾಮಾನ್ಯವಾಗಿ ಹಳೆಯ ಪೇಪರುಗಳು, ಅದರಲ್ಲಿಯೂ ಅಪಘಾತ ಮತ್ತು ರಕ್ತದ ವರ್ಣಚಿತ್ರಗಳಿರುವ ಪತ್ರಿಕೆಗಳೆಂದರೆ ಅವಕ್ಕೆ ಇಷ್ಟ. ಇತ್ತೀಚೆಗೆ ಪತ್ರಿಕೆಗಳಲ್ಲಿ ಅಂತಹವೇ ಹೆಚ್ಚಾಗಿ ಜಿರಲೆಗಳಿಗೆ ಹಬ್ಬವೋ ಹಬ್ಬ. ನಮ್ಮ ಮನೆಯಲ್ಲಿ ಇರುವ ಎರಡು ಟಿವಿಗಳಲ್ಲಿ ಒಂದು ನನ್ನ ಸ್ವಂತ ಉಪಯೋಗಕ್ಕೆ. ನಾನು ಹೆಚ್ಚಾಗಿ ನ್ಯೂಸ್ ನೋಡುವುದರಿಂದ ಸಹಜವಾಗಿಯೇ ಆ ಟಿವಿಯೊಳಗೆ ಜಿರಲೆಗಳು ಹೆಚ್ಚಾಗಿ ಇರುತ್ತವೆ.

ಏನು ಹುಡುಕ್ತಾ ಇದ್ದೀ ಕಾಶೀ? ಕೇಳಿದೆ.

ಹಿಂಸಾಚಾರ ಬಿಟ್ಟು ಚುನಾವಣೆಯಲ್ಲಿ ಗೆದ್ದು ಬನ್ನಿ ಎಂದು ಹಿಂದಿನ ಪ್ರಧಾನಿಗಳಲ್ಲಿ ಯಾರಾದರೂ ಕರೆ ಕೊಟ್ಟಿರಬಹುದೇನೋ ಎಂದು ಹುಡುಕುತ್ತಿದ್ದೆ. ಸಿಗಲಿಲ್ಲ, ಎಂದ.

ಯಾರಿಗೋ?

ಇನ್ನಾರಿಗೋ? ವೀರಪ್ಪನ್‌ನಿಗೆ. ಸಿಗಲಿಲ್ಲ.

ಆ ವಿಷಯ ಯಾಕೆ ಬಂತು ಈಗ?

ಅದೇ, ಹಿಂಸೆ ಬಿಟ್ಟು ಚುನಾವಣೆಯಲ್ಲಿ ಗೆದ್ದು ಬನ್ನಿ ಎಂದು ನಕ್ಸಲರಿಗೆ ಇಂದಿನ

ಪ್ರಧಾನಿಗಳು ಹೇಳಿಕೆ ಕೊಟ್ಟಿದ್ದಾರಲ್ಲ, ಇದೇ ಬಹುಶಃ ಮೊದಲನೆಯದಿರಬಹುದು; ಎಂದ.

ಈ ಹೇಳಿಕೆ ಬಗ್ಗೆ ನಿನ್ನ ಅಭಿಪ್ರಾಯ ಏನು ಕಾಶಿ? ನಾನು ಪ್ರಶ್ನಿಸಿದೆ.

ಈ ನಕ್ಸಲರು ಕಾಡುಗಳಲ್ಲಿ ಅವಿತುಕೊಂಡು, ಸೊಳ್ಳೆಗಳಿಂದ ಕಚ್ಚಿಸಿಕೊಂಡು, ರಾತ್ರಿ ನಿದ್ರೆ ಬಿಟ್ಟು ಕೊಲೆ-ದರೋಡೆ ಮಾಡೋ ಕಷ್ಟ ಯಾಕೆ ಪಡಬೇಕು ಅಂತೀನಿ? ಸುಲಭವಾಗಿ ರಾಜಕೀಯ ಸೇರಿಕೊಳ್ಳಬಾರದೇ? ಹೀಗೆ ರಾಜಕೀಯ ಪುಡಾರಿಯಾದರೆ ನಿದ್ರೆ ಬಿಡದೇ, ನಗರಗಳಲ್ಲಿ ಹವಾ ನಿಯಂತ್ರಿತ ಬಂಗಲೆಗಳಲ್ಲಿ ಇದ್ದುಕೊಂಡೇ ಕೊಲೆ ದರೋಡೆ ಮಾಡಬಹುದು. ಏನಂತೀಯ? ನನ್ನನ್ನೇ ಕೇಳಿದ ಮಹಾಶಯ.

ಹೌದಲ್ಲವೇನೋ? ನಾನು ಅಚ್ಚರಿ ವ್ಯಕ್ತಪಡಿಸಿದೆ. ಹಿಂಸೆ ಬಿಟ್ಟು ಮುಖ್ಯವಾಹಿನಿಗೆ ಸೇರಿಕೊಂಡು, ಹಿಂಸೆ ಮೂಲಕ ಚುನಾವಣೆಯಲ್ಲಿ ಗೆಲ್ಲಬಹುದು. ನಂತರ ಎಷ್ಟೇ ಹಿಂಸೆ ಮಾಡಿದರೂ, ಗೂಂಡಾಗಿರಿ ಮಾಡಿದರೂ ಪೊಲೀಸರಿಂದ ಎನ್‌ಕೌಂಟರ್‌ಗಳಲ್ಲಿ ಸಾಯುವ ಭೀತಿಯಿಲ್ಲ. ಇದೇ ಒಳ್ಳೆಯ ಸಲಹೆ, ಎಂದೆ ನಾನು.

ಮಾತ್ರವಲ್ಲ, ಅವರಿಗೆ ಅದೇ ಪೊಲೀಸರು ರಕ್ಷಣೆ ನೀಡುತ್ತಾರೆ. ಸೆಕ್ಯುರಿಟಿ ಇರೋದ್ರಿಂದ ಸಾವಿನ ಭಯವೂ ಇರೋಲ್ಲ. ಮತ್ತೆ ಯಾವುದಾದರೂ ತರಲೆ ಪತ್ರಿಕೆ ಅವರ ಚರಿತ್ರೆಯನ್ನು ಕೆದಕಿದರೆ ಸರಕಾರ ಅದರ ಸತ್ಯಾಸತ್ಯತೆ ತಿಳಿಯಲು ಒಂದು ತನಿಖಾ ಸಮಿತಿ ನೇಮಿಸುತ್ತದೆ. ಹತ್ತಾರು ವರ್ಷಗಳ ನಂತರ ಅದರ ವರದಿ ಬರುವಾಗ..

ತಿಳೀತು ಬಿಡು. ಆಪಾದಿತ ಆಗ ಬದುಕಿರಲಿಕ್ಕಿಲ್ಲ, ಸರಕಾರ ಬದಲಾಗಿರಬಹುದು, ಅಥವಾ ಜನ ಮರೆತಿರುತ್ತಾರೆ. ಆದಕಾರಣ ನಕ್ಸಲರು ಕಾಡಿನಲ್ಲಿ ಕಷ್ಟಪಡೋದಕ್ಕಿಂತ ರಾಜಕೀಯ ಸೇರೋದೇ ವಾಸಿ, ಏನಂತೀಯ? ಎಂದೆ.

ಓಡಿಹೋಗುತ್ತಿದ್ದ ಜಿರಲೆಯೊಂದರ ತಲೆಯ ಮೇಲೆ ರಭಸದಿಂದ ಹೊಡೆದಳು ಮಾದೇವಿ. ಜಿರಲೆ ನಮ್ಮ ದೇಶದ ಶ್ರೀಸಾಮಾನ್ಯನಂತೆ ವಿಲವಿಲ ಒದ್ದಾಡುತ್ತಿತ್ತು.

★★★



ಕೇವಲ ದೃಷ್ಟಿಯಿಂದ
ಕೊಲ್ಲಕ್ಕೆ ಆಗೋ
ಹಾಗಿದ್ರೆ.....

# ಹಾಸ್ಯಬ್ರಹ್ಮ ಟ್ರಸ್ಟ್
# ಕೊರವಂಜಿ ಅಪರಂಜಿ ಟ್ರಸ್ಟ್

ಸಾದರಪಡಿಸುವ

**ಡಾ|| ಬಿ.ಜಿ.ಎಲ್. ಸ್ವಾಮಿ ಸಂಸ್ಮರಣೆಯ**

# ಹಾಸ್ಯೋತ್ಸವ

25-12-2005 ರಂದು ಭಾನುವಾರ

'ಹಸಿರು ಹೊನ್ನಿ'ನ ಹಸ್ತಾಂತರ: ಡಾ|| ಎಂ.ಎಸ್. ತಿಮ್ಮಪ್ಪನವರಿಂದ

ಶ್ರೀ ಎ.ಎಚ್. ರಾಮರಾವ್ ಅವರಿಗೆ

ಸ್ವಾಮಿಯಾನ: ಡಾ|| ಪ್ರಭುಶಂಕರ ಅವರಿಂದ

ಪ್ರಾಧ್ಯಾಪಕನ ಪೀಠದಲ್ಲಿ: ಪ್ರೊ|| ಎಂ. ಕೃಷ್ಣೇಗೌಡ

ಗೀತ ಸೌಗಂಧ: ಉಪಾಸನ ತಂಡದಿಂದ

ಗೌರವಾರ್ಪಣೆ: ಡಾ|| ಮುಳುಕುಂಟೆ ರಮೇಶ್‌ರವರಿಗೆ

ಪ್ರಸಂಗದಲ್ಲಿ ಹಾಸ್ಯಧಾರೆ: ಕರ್ನಾಟಕ ಕಲಾ ದರ್ಶಿನಿ ತಂಡದಿಂದ

ಚಿತ್ರವಿಚಿತ್ರ 'ಅತ್ತೆ-ಸೊಸೆ': ಅರ್ಚನಾ ಶ್ಯಾಂ ಮತ್ತು ಎಸ್.ಕೆ. ಮಾಧವರಾವ್

ವಾಣಿ ವಿದ್ಯಾಕೇಂದ್ರ ಮಕ್ಕಳಿಂದ ಅಭಿನಯ ವೈವಿಧ್ಯ

ಮನರಂಜನೆ: ಗಾನವಿನೋದಿನಿ

ಉಸ್ತುವಾರಿ: ಪ್ರೊ|| ಅ.ರಾ. ಮಿತ್ರ

ಸಹಾಯ: ಬೇಲೂರು ರಾಮಮೂರ್ತಿ, ವೈ.ವಿ. ಗುಂಡೂರಾವ್

ಸ್ಥಳ: ಎಚ್.ಎನ್. ವೇದಿಕೆ, ನ್ಯಾಷನಲ್ ಕಾಲೇಜು, ಜಯನಗರ

ಸಮಯ: ಬೆಳಿಗ್ಗೆ 10.30ಕ್ಕೆ

***ಎಲ್ಲರಿಗೂ ಆದರದ ಸ್ವಾಗತ***

*ಹಾಸ್ಯೋತ್ಸವ ಪರಿವಾರದ ಪರವಾಗಿ*

**ಎಂ. ಶಿವಕುಮಾರ್** **ಕೃಷ್ಣ ಸುಬ್ಬರಾವ್**

*ಸಂಪರ್ಕ ವಿಳಾಸ:* 'ಸುಕೇಶವ' 96, 2ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಬಿ.ಟಿ.ಎಂ.
ಒಂದನೇ ಹಂತ, ಬೆಂಗಳೂರು - 68

# ಡಬ್ಬಲ್ ಮಾಡೋದು

**– ಬೇಲೂರು ರಾಮಮೂರ್ತಿ**

ಸೀನಣ್ಣ ಬರ ಬರ ಬರ್‍ತಾ ಇದ್ದದ್ದು ನೋಡಿ ಆಹಾ ಇವನನ್ನು ಒಲಂಪಿಕ್ಸ್‌ಗೆ ಕಳಿಸಬಹುದು ಸೀನಣ್ಣಾ ಎಂಥಾ ಠೆಬ್ಬಿಳಿ ಅಣ್ಣಾ ಅಂತ ಲಂಬೋದರ ತನ್ನ ಗುಂಡು ಉದರವನ್ನು ಸವರಿಕೊಂಡು ಜನಿವಾರವನ್ನು ಒಂದೆರಡು ಸಾರ್ತಿ ಜಗ್ಗೋ ಹೊತ್ತಿಗೆ ಸೀನಣ್ಣನ ಸವಾರಿ ಬಂದಿಳಿಯಿತು. ಕ್ಷುಬಿಚಾಣಾಕ್ಷಿಬಿ, ಪೀಠಿಕೆ ಇಂಥಾದ್ದನ್ನೆಲ್ಲ ಉಪಯೋಗಿಸಿ ಅಭ್ಯಾಸವೇ ಇಲ್ಲದ ಸೀನಣ್ಣ ದರಿದ್ರದ ಬದುಕು ಬದುಕ್ಲೇ ಬಾರ್‍ದು ಸತ್‌ಹೋಗಬೇಕು ಅಂದು ಹೆಗಲ ಮೇಲಿನ ಚೌಕದಿಂದ ಜಗಲಿಯ ಧೂಳು ಜಾಡಿಸಿ ಕೂತ್ಕೊಂಡ. ''ಅಲ್ವೋ ಬೇಕೂಫ ಬದುಕಬಾರ್‍ದು ಅಂದ್ರೆ ಸಾಯಬೇಕು, ಸಾಯಬೇಕು ಅಂದ್ರೆ ಬದುಕ್ಬಾರ್‍ದು ಅಂತ ಎಲ್ರಿಗೂ ಗೊತ್ತು ಅದನ್ನೇನು ವಟವಟ ಅಂತೀಯ ನಿನ್ನಂತಹ ಅರವತ್ತರವರಿಗೆ ಹೀಗೆ ಅನ್ನೋದು ಸಹಜ'' ಅಂದ ಲಂಬೋದರ. ನಿಂಗೇನ್‌ಗೊತ್ತು ನನ್ ತಾಪತ್ರಯ ನಿನಗಾಗಿದ್ರೆ ನೀನೂ ಹೀಗೇ ಆಡ್ತಿದ್ದೆ ಎಲ್ಲಿ ಒಂದು ಚಿಟಿಕೆ ನಶ್ಯ ಕೊಡು ಅಂದು ಸೀನಣ್ಣ ನಶ್ಯ ಮೂಗಿಗೇರಿಸಿ ಮಂಡಿ ಮಡಿಸಿ ಕಂಬ ಒರಗಿ ಕೂತ. ಲಂಬೋದರ ಒಳಗೆ ಹೋಗಿ ನೆನ್ನೆ ತಾನೇ ಹೆಂಡ್ತಿ ಮಾಡಿಟ್ಟಿದ್ದ ಅವಲಕ್ಕಿ ಪುರಿನ ಒಂದು ತಟ್ಟೇಲಿ ಹಾಕಿ ತಂದ್‌ಕೊಟ್ಟ ಅದಿಕ್ಕೆ ಸೀನಣ್ಣ ನಂಗೆ ಇದು ಬೇಡ ಅಂದ. ಯಾಕೋ ಅಂತ ಕೇಳಿದ್ರೆ ಹೋದವಾರ ನಿನ್ ಹೆಂಡ್ತಿ ಮಾಡಿದ್ದ ತಂಬಿಟ್ಟು ನನಗೆ ಕೊಟ್ಟದ್ದಕ್ಕೆ ಅವಳು ನಾನು ಮಾಡಿದ ತಿಂಡಿ ಬೀದೀಲಿ ಹೋಗೋರಿಗೆಲ್ಲ ಕೊಡೋಕಲ್ಲ ಅಂತ ನನಗೆ ಕೇಳೋಹಾಗೇ ಹೇಳಿದ್ರಲ್ಲ ಅಂದ. ಅದಿಕ್ಕೆ ಲಂಬೋದರ ಲೋ ಅವಳ ಮಾತ್ನ ಸರಿಯಾಗಿ ಅರ್ಥ ಮಾಡ್ಕೊಳೋ. ಅವಳು ಹೇಳಿದ್ದು ಬೀದೀಲಿ ಹೋಗೋರಿಗೆ ಅಂದ್ರೆ ಭಿಕ್ಷುಕರಿಗೆ ಕೊಡಬೇಡಿ ಅಂತ. ಬಂದು ಜಗಲಿಮೇಲೆ ಕೂತ್ಕೊಳೋರಿಗೆ ಕೊಡಬೇಡಿ ಅಂತೇನೂ ಹೇಳಿಲ್ವಲ್ಲ ಅಂತ ಸಮಾಧಾನ ಮಾಡಿದರೂ ಸೀನಣ್ಣ ಅವಲಕ್ಕಿ ಪುರಿಗೆ ಕೈ ಹಾಕಲಿಲ್ಲ.

ಸೀನಣ್ಣ ಒಳಗೊಳಗೇ ಏನೋ ನುಂಗಿಕೊಂಡು ಕಷ್ಟ ಪಡ್ತಿದಾನೆ ಅಂತ ಲಂಬೋದರನಿಗೆ ಅರ್ಥವಾಯ್ತು. ಇನ್ನೇನು ಈ ವಯಸ್ಸಿನಲ್ಲಿ ಪತ್ನೀ ಪೀಡೆ ಇದ್ದೀತು ಅನಿಸಿತು. ಆದರೆ ಗೆಸ್ ಮಾಡೋದು ಯಾಕೆ ಅವನೇ ಒದರ್‍ಲಿ ಅಂತ ಲಂಬೋದರ ಬಲವಂತ ಮಾಡಿದ ಮೇಲೆ ಸೀನಣ್ಣ ಅವಲಕ್ಕಿ ಪುರಿಗೆ ಕೈ ಹಾಕಿದ ನಂತರ ವಯಸ್ಸಾದೋರ್‍ನ ಕಂಡ್ರೆ ಟೋಪಿ ಹಾಕೋಕೆ ಕಾಯ್ತಿರ್‍ತಾರೆ ಜನ. ಇದಕ್ಕೆ ಮಕ್ಕಳು ಮೊಮ್ಮಕ್ಕಳೂ ಹೊರತಲ್ಲ ಅಂದ. ಲಂಬೋದರನಿಗೆ ಅರ್ಥವಾಯ್ತು ಮಕ್ಕಳೋ ಮೊಮ್ಮಕ್ಕಳೋ ಸೀನಣ್ಣನಿಗೆ ಟೋಪಿ ಹಾಕಿದಾರೇಂತ ಸ್ವಲ್ಪ ಹೊತ್ತು ವಿರಾಮ. ನಂತರ ಅವರ ಸಂಭಾಷಣೆ ಹೀಗೆ ಸಾಗಿತ್ತು. ಮೊದಲು ಸೀನಣ್ಣ ಆಮೇಲೆ ಲಂಬೋದರ ಮಾತಾಡಿದ ರೀತೀಲಿ ಓದ್ಕೊಳಿ.

''ಅಲ್ಲಯ್ಯ ಅವನು ಹೀಗೆ ಮಾಡಬಹುದಿತ್ತಾ''

''ಯಾರು''

''ಅವನೇ ಗುರುಂಘಾತುಕ ವೆಂಕಟೇಶ''

''ವೆಂಕಟೇಶ ಅಂದ್ರೆ ನಿನ್ನ ಮೊಮ್ಮಗ ಅಲ್ವೇನೋ''

''ಹೌದು ಅವನೇ... ಮಾಡೋದು ಮಾಡ್ದೆ ಜೊತೆಗೆ ಒಂದು ತೊಟ್ಟು ವಿಷಾನೂ ತಂದ್ ಕೊಟ್ಟಿಡು ಅಂದೆ.''

''ಯಾಕೆ ಅವನೇನು ಮಾಡ್ದ''

''ಅಲ್ಲಯ್ಯ ನಾನು ನನ್ನ ಸ್ಥಿತಿ ನಿನಗೆ ಗೊತ್ತು. ನನಗೇನು ಪೆನ್‌ಷನ್ ಬರಲ್ಲ, ಕೊನೆಗಾಲಕ್ಕೆ ಆಪದ್ಧನ ಅಂತ ಒಂದು ಲಕ್ಷ ರೂಪಾಯಿ ಇಟ್ಕೊಂಡಿದ್ದೆ ಅದನ್ನ ಕೊಡಿ ತಾತ ಬಿಸಿನೆಸ್‌ಗೆ ಹಾಕ್ಕೊಂಡು ಆರು ತಿಂಗಳಲ್ಲಿ ನಿಮಗೆ ಡಬಲ್ ಮಾಡಿಕೊಡ್ತೀನೀಂದ''

''ನೀನು ಕೊಟ್ಯಾ''

''ಕೊಡೋಕೆ ಒಪ್ಲಿಲ್ಲ, ಬೇಡಾಂದ್ರೆ ಕೇಳ್ಲಿಲ್ಲ, ಪೀಡಿಸಿದ, ಒಂದು ತಿಂಗಳು ಕಾಡಿ ಬೇಡಿ ಅವರಪ್ಪನ ಕೈಲಿ ಹೇಳಿಸಿದ. ಅದೇನೋ ಬಿಸಿನೆಸ್ಸು ಅಂದ. ಅವರಪ್ಪನೂ ತಾಳ ಹಾಕಿದ. ನಾನು ಕಾಸು ಪೀಕೋತನಕ ನನಗೆ ಉಸಿರಾಡಕ್ಕೂ ಬಿಡಲಿಲ್ಲ.''

''ಅಂತೂ ಲಕ್ಷ ರೂಪಾಯಿ ಕೊಟ್ಯಾ''

''ಕೊಟ್ಟೆ. ಕೊಟ್ಟೇ ಒಂದು ವರ್ಷ ಆಯ್ತು''

''ಓಹೋ ಡಬ್ಬಲ್ ಬಂದಾಯ್ತಾ''

''ಬಂತು ಡಬ್ಬಲ್ಲು... ಅಲ್ಲಯ್ಯ ಇರೋದೇ ಒಂದು ಲಕ್ಷ ಇದರಲ್ಲಿ ಉಳಿದ ಜೀವನಕ್ಕೆ, ಕಾಹಿಲೆ ಕಸಾಲೆ ಅಂದ್ರೆ ಏನಪ್ಪ ಮಾಡ್ಲಿ ಅಂತ ಯೋಜನೇಲಿದ್ದೆ ಇರೋದ್ನ ಕಿತ್ಕೊಂಡು ನನ್ನ ಚಿಂತೇನೇ ಡಬ್ಬಲ್ ಮಾಡಿಬಿಟ್ಟ.''

''ಸರಿಯಾಯ್ತಲ್ಲ ಅಲ್ಲಿಗೆ ಅವನು ಹೇಳಿದ್ದೂ ಅದನ್ನೇ. ಆದ್ರೆ ನೀನು ದುಡ್ಡು ಡಬಲ್ ಮಾಡಿಕೊಡ್ತಾನೆ ಅಂತ ತಪ್ಪಾಗಿ ಭಾವಿಸಿಬಿಟ್ಟಿದ್ದೆ ಅಷ್ಟೆ.''

''ಮುಖದ ಮೇಲೆ ಹಾಕಿದಾ ಅಂದ್ರೆ ಮುಖ ಮುನ್ನೂರು ಚೂರಾಗಿಬಿಡಬೇಕು ನನ್ನನ್ನೇನು ಹೆಡ್ಡ ಅಂದ್ಕೊಂಡ್ಯಾ.''

''ಕೋಪ ಮಾಡ್ಕೊಬೇಡ್ವೋ... ಸ್ವಲ್ಪ ತಮಾಷೆ ಮಾಡ್ದೆ ಅಂದ್ರೆ ನಿನ್ನ ವರಿ ಈಗ ಡಬ್ಬಲ್ ಆಯ್ತು... ಮುಂದೆ''


ಕೇಳಿದ್ರೆ ಈಗ ಆಗ ಇವತ್ತು ಅವತ್ತು ಅಂತಾನೆ ದಬಾಯಿಸಿದರೆ ಅಷ್ಟಕ್ಕೂ ನಿಂಗೆ ಯಾಕೆ ಬೇಕು ದುಡ್ಡು ಅಂತಾನೆ. ಮೊನ್ನೆ ಕಣಯ್ಯ ಸರಿಯಾಗಿ ಬೈದು ಕೇಳ್ದಕ್ಕೆ ತಾತಾ ನೀನು ನನಗೆ ದುಡ್ಡು ಕೊಟ್ಟೆ ಅನ್ನೋದಿಕ್ಕೆ ಏನು ಗ್ಯಾರಂಟಿ ಅಂತಾನೆ.''

ಹೀಗಂದ ಸೀನಣ್ಣ ಜೋರಾಗಿಯೇ ಅತ್ತ. ಅಳು ಶಬ್ದ ಕೇಳಿ ಒಳಗಿಂದ ಬಂದ ಲಂಬೋದರನ ಹೆಂಡತಿ ಕನಕಲಕ್ಷ್ಮಿ 'ಯಾಕ್ರೀ ಹೀಗೆ ಅಳ್ತಿದಾರೆ' ಅಂದಳು. 'ಹೋಗು ಸ್ವಲ್ಪ ಬಿಸಿ ಕಾಫಿ ಮಾಡ್ಕೊಂಬಾ' ಅಂತ ಹೆಂಡ್ತಿನ ಮತ್ತೆ ಒಳಕ್ಕೆ ಕಳಿಸಿ 'ಸೀನಣ್ಣ ಸಮಾಧಾನ ಮಾಡ್ಕೊ. ಒಳ್ಳೆ ಉಪಾಯದಿಂದ ಹೇಗಾದರೂ ಮಾಡಿ ಅವನಿಂದ ದುಡ್ ಕೀಳೋ

ವಿಧಾನ ಕಂಡುಹಿಡ್ಕೊ. ಡಬಲ್ ಮಾಡ್ತೀನಿ ಅಂದಿದ್ನಲ್ಲ ಡಬಲ್ ಬೇಡ ಸಿಂಗಲ್ಲಾದರೂ ಕೊಡು ಅಂತ ಹೇಳು'' ಅಂತ ಸಾಂತ್ವನಗೊಳಿಸಿದ.

ಲಂಬೋದರ ಹಾಗಂದ ತಕ್ಷಣ ಸೀನಣ್ಣ ಮತ್ತೆ ಬಿಕ್ಕಿದ. ಜೋರಾಗಿ ಬಿಕ್ಕಿದ; ಮುಖ ಮುಚ್ಚಿಕೊಂಡ ಅಯ್ಯಯ್ಯೊ ಅಂದ... ಲಂಬೋದರನಿಗೆ ಗಾಭರಿಯೇ ಆಯಿತು. ''ಮೊಮ್ಮಗ ಹೀಗೆ ಮಾಡ್ತಾನೆ ಅಂತ ಮಗನ ಹತ್ರ ಹೇಳಿದ್ರೆ ಅವನು ಮಗನಿಗೆ ಬೈಯೋ ಬದಲು ನನಗೇ ಅದ್ಯಾಕೆ ದುಡ್ಡು ದುಡ್ಡು ಅಂತ ಹೊಡ್ಕೊತೀಯಾ. ನಿಂಗೆ ಯಾಕೆ ಬೇಕು ದುಡ್ಡು. ಏನು ಹೊತ್ಕೊಂಡ್ ಹೋಗ್ತೀಯಾ... ತಾತನ ಆಸ್ತಿ ಹೇಗಿದ್ರೂ ಮೊಮ್ಮಗನಿಗೇ ತಾನೇ. ಆಮೇಲೆ ತಗೊಳೋದು ಬಿಟ್ಟು ಈಗಲೇ ತಗೊಂಡಿದಾನೆ'' ಅಂದುಬಿಟ್ಟ ಮಗ. ಇವರನ್ನೆಲ್ಲ ಕಟ್ಕೊಂಡು ಹೇಗಯ್ಯಾ ಉದ್ಧಾರ ಆಗ್ಲಿ. ಅಂದು ಸೀನಣ್ಣ ಅಳೋ ಸೀನ್‌ನ ಮುಂದುವರಿಸಿದ.

ಲಂಬೋದರನಿಗೆ ಈಗ ಅನಿಸಿದ್ದೇನೆಂದರೆ ಸೀನಣ್ಣನ ವರಿ ಬರೀ ಡಬಲ್ ಅಲ್ಲ ಡಬ್‌ಕು ಡಬಲ್ ಡಬಲ್ ಟುದಿ ಪವರ್ ಆ ಟು. ಕಾಫಿ ಬಂತು ಈ ನಾಟಕ ಆಡ್ಕೊಂಡು ಇವರನ್ನೆಲ್ಲಾದರೂ ಹಣಕ್ಕೆ ಪೀಡಿಸಿಯಾನು ಅಂತ ಕನಕಲಕ್ಷ್ಮಿ ಲಂಬೋದರನನ್ನು ಒಳಗೆ ಕರೆದು ಕಿವಿ ಹಿಂಡಿ ಕಳಿಸಿದಳು. ಏನಯ್ಯ ಮಾಡ್ಲಿ ಈಗ ಅಂತ ಸೀನಣ್ಣ ಕೇಳಿದಾಗ ಲಂಬೋದರ ಏನೂ ಹೇಳೋ ಸ್ಥಿತೀಲಿರಲಿಲ್ಲ. ಬೀಸೋ ದೊಣ್ಣೆ ತಪ್ಪಿಸ್ಕೊಬೇಕಲ್ಲ ಅಂತ ''ಒಂದ್ಕೆಲ್ಸ ಮಾಡು ನನ್ನ ಸ್ನೇಹಿತನ ಸೋದರಮಾವನ ಅಂಕಲ್ ಒಬ್ಬರು ಇದೇ ಸ್ಥಿತೀಲಿದ್ರು. ಅವರು ಏನು ಮಾಡಿದ್ರು ಅಂತ ಕೇಳಿ ಹೇಳ್ತೀನಿ ಅಲ್ಲಿವರೆಗೂ ಸಮಾಧಾನವಾಗಿರು ಅಂದ. ಏನು ಸಮಾಧಾನವಾಗಿರೋದಯ್ಯ ಚಿಂತೆ ದಿನದಿನಕ್ಕೆ ಡಬಲ್ ಆಗ್ತಿದೆ. ನಿಜವಾಗಿಯೂ ಈ ಡಬಲ್ ಅನ್ನೋರ್ನ ನಂಬಲೇಬಾರದು ಅವರು ಮಕ್ಕಳಾದ್ರೂ ಸರಿ ಮೊಮ್ಮಕ್ಳಾದ್ರೂ ಸರಿ ಅಂದು ಸೀನಣ್ಣ ಚಿಟಿಕೆ ನಶ್ಯ ಮೂಗಿಗೇರಿಸಿ ಆಚೆ ಹೊರಟಾಗ ಅವನನ್ನು ನೋಡ್ತಾ ನಿಂತಿದ್ದ ಲಂಬೋದರನನ್ನು ಕಂಡು ಕನಕಲಕ್ಷ್ಮಿ ಅವರನ್ನೇನು ನೋಡ್ತಾ ನಿಂತ್ರಿ ಬಾಗಿಲು ಹಾಕ್ರೀ ಅಂದಳು.



ಮಾನವನ ವಿಕಾಸದ ಹಾದಿ!

# ತುಂತುರು

– ದನಂಆ

- ಈ ರ್‍ಯಾಟ್ ರೇಸ್‌ನ ದೊಡ್ಡ ಸಮಸ್ಯೆ ಎಂದರೆ ನೀವು ಗೆದ್ದರೂ ರ್‍ಯಾಟ್ ಆಗಿಯೇ ಉಳಿಯಬೇಕಾಗುತ್ತದೆ.
- ಗ್ರೆಗ್ ಚಾಪೆಲ್, ಭಾರತದ ರಾಜಕಾರಣಿಗಳಿಗೂ ಒಂದಿಷ್ಟು ತರಬೇತಿ ನೀಡಿ.
- ಬಹಳಷ್ಟು ಮಂದಿ ಏಕೆ ಬದುಕಿದ್ದಾರೆ ಎಂದರೆ ಕೊಲ್ಲುವುದು ಅಪರಾಧ ವಾಗಿರುವುದರಿಂದ.
- ಲೋಕಾಯುಕ್ತರು ಭ್ರಷ್ಟ ಅಧಿಕಾರಿಗಳನ್ನು ಬಲೆಗೆ ಕೆಡುವುತ್ತಿರುವ ವೇಗ ನೋಡಿದರೆ ಅವರೂ ಈ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದಾರೆ ಎಂದು ಕೆಲವರು ಆಡಿಕೊಳ್ಳಲು ಸಾಧ್ಯ.
- ಅಂದು: ನಾವಿಬ್ಬರು, ನಮಗೆ ಇಬ್ಬರು ಮಕ್ಕಳು. ನಂತರ: ನಾವಿಬ್ಬರು, ನಮಗೊಂದೇ ಮಗು. ಮುಂದೆ: ನಾವಿಬ್ಬರೇ ಸಾಲದೆ?
- ಮನುಷ್ಯ ಪಿಶಾಚಿ ಆಗುವುದು ಸುಲಭ. ಪಿಶಾಚಿ ಮತ್ತೆ ಮನುಷ್ಯನಾಗುವುದು ಕಷ್ಟ. (ghost writers ಬಗ್ಗೆ)
- ಪ್ರತಿ ಯಶಸ್ವಿ ಗಂಡಿನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎನ್ನುವಂತೆ ಪ್ರತಿ ಕಳಂಕ ಹೊತ್ತ ರಾಜಕಾರಣಿಯ ಹಿಂದೆ ಒಬ್ಬ ಪುತ್ರ ಇರುತ್ತಾನೆ.
- ಟೀವಿ ಚಲೆ ರಿಮೋಟ್‌ಸೆ, ಬೀಬಿ ಚಲೆ ನೋಟ್ ಸೆ.
- ಪ್ಯಾಂಟ್ ಎತ್ತಿಕೊಂಡು ಧರಮ್‌ಸಿಂಗ್ ಬಂದ್ರು; ಪಂಚೆ ಮೇಲೆತ್ತಿಕೊಂಡು ದೇವೇಗೌಡ್ರು ಬಂದ್ರು. ತುದಿಗಾಲು ನೀರಿಗೆ ಇಳಿಸಿ ಫೋಟೋ ಕ್ಲಿಕ್ಕಿಸಿಕೊಂಡ್ರು, ಅವರ ಪಕ್ಕದಲ್ಲಿ ಅಧಿಕಾರಿಗಳು ಹಲ್ಲು ಕಿಸಿದ್ರು. ಪರಿಸ್ಥಿತಿ ಏನಾದರೂ ನೆಟ್ಟಗಾಯ್ತ? (ಮಳೆ ಹಾನಿ ಬಗ್ಗೆ)
- ಕಾಶಿಗೆ ಹೋಗಿ ಏನಾದರೂ ಬಿಟ್ಟು ಬರುವ ಸಂಪ್ರದಾಯ ಇದೆ ಅಲ್ಲವೆ? ನಾನು ಷಾಪಿಂಗ್ ಮಾಡೋದನ್ನ ಬಿಟ್ಟೆ.
- ತೊಂದರೆ ರಹಿತ ಮುಷ್ಕರವನ್ನು ಯಾರೂ ಇನ್ನೂ ಕಂಡು ಹಿಡಿದಿಲ್ಲ. ಅವೆರಡೂ ವಿರುದ್ಧಾರ್ಥ ಪದಗಳು.
- ಭಾರತದಲ್ಲಿ ಎಲ್ಲೆಡೆ ರಾಜಕೀಯದ ಅಪರಾಧೀಕರಣ ಕಳವಳ ಮೂಡಿಸಿದರೆ ಬಿಹಾರದಲ್ಲಿ ಅಪರಾಧದ ರಾಜಕೀಯಕರಣ ಕಳವಳ ಮೂಡಿಸುತ್ತಿದೆ.

Mailing Date 5th of every month
Reg. No.: CPMG/KA/BGW-544/2003-05 RNI-KAR KAN / 2005 / 15457



Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999. Editor: M. SHIVAKUMAR